

ಶ್ರೀ ರಾಘವೇಂದ್ರತೀರ್ಥಗುರುಸಾರ್ವಭೌಮರ

ವ್ಯಾಖ್ಯಾನ ಸಮಲಂಕೃತವಾದ

ಪುರುಷಸೂಕ್ತಮ್

ಶ್ರೀಸುಯಮೀರಾಘವೇಂದ್ರ
ಪ್ರಕಾಶನ ಸಂಖ್ಯೆ - 27

ಶ್ರೀಸುಶೀಲೇಂದ್ರವಿಜಯಮಾಲಾ
ಸಂಖ್ಯೆ - 17

ಕಮಲೇಶ ಕುಸುಮ - 7

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಮ್

ಶ್ರೀಪುರುಷಸೂಕ್ತವ್ಯಾಖ್ಯಾನಮ್

ಅನುವಾದಕರು :

ವಿದ್ವಾನ್ ಜಿ. ಗುರುವೇಂಕಟಾಚಾರ್ಯ ಎಂ.ಎ.
ಪ್ರಾಧ್ಯಾಪಕರು
ಶ್ರೀಪೂರ್ಣಪ್ರಜ್ಞ ವಿದ್ಯಾಪೀಠ,
ಬೆಂಗಳೂರು

ಪ್ರಕಾಶಕರು :

ಶ್ರೀಸುಯಮೀರಾಘವೇಂದ್ರ ಸಂಶೋಧನ ಕೇಂದ್ರ
ನಂಜನಗೂಡು - ಬೆಂಗಳೂರು

2010

Rarest Archiver

ಸಂಸ್ಥೆಯ ಸಾಮ್ರಾಟ್ ಪೋಷಕರು



ಪೊಡವಿಗೊಡೆಯರಾದ ಶ್ರೀಗುರುರಾಯರನ್ನು ಹೃದಯಗುಡಿಯಲ್ಲಿ ಅಡಗಿಸಿ ಎಂದೂ ಮಾಸದ
ಮೃದು ಮಧುರ ಮುಗ್ಧ ನಗೆಯನ್ನು ಹೊರಸೂಸುತ್ತ ತಮ್ಮ ಅಮೃತಹಸ್ತದ ಹಿಡಿಯಿಂದ ಮಂತ್ರಾಕ್ಷತೆಯನ್ನು
ನೀಡುತ್ತಾ ತೇಡಿಬಂದು ಬೇಡಿದವರ ಇಷ್ಟಾರ್ಥಗಳನ್ನು ಇಡೇರಿಸುತ್ತಾ ಅನಂತ ಭಕ್ತಸಮೂಹದಿಂದ

'ನಡೆದಾಡುವ ರಾಯರು' ಎಂದು

ಪ್ರಾಥಃಸ್ಮರಣೀಯರಾಗಿ ಭಕ್ತಿ ಗೌರವದಿಂದ ಪೂಜಿಸಲ್ಪಡುತ್ತಿರುವ

'ಶ್ರೀ ರಾಯರ ಕರುಣೆಯ ಕಂದರಾದ' ಪರಮಪೂಜ್ಯ

1)8 ಶ್ರೀ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರು.

Rarest Archiver

Rarest Archiver

॥ ಶ್ರೀಮನ್ಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಗ್ರಂಥಸಮರ್ಪಣೆ

ಭಾಷ್ಯಕಾರರಾಗಿ, ಟೀಕಾಕಾರರಾಗಿ, ಟಿಪ್ಪಣಿಕಾರರಾಗಿ,
ಶ್ರೀಮನ್ಮಧ್ವಸಿದ್ಧಾಂತವೆಂಬ ತತ್ತ್ವಜ್ಞಾನ ಕಲ್ಪವೃಕ್ಷವನ್ನು
ತಮ್ಮ ಅಪೂರ್ವ, ಅಸದೃಶ, ಶ್ರೇಷ್ಠ ಗ್ರಂಥಗಳಿಂದ
ಫಲಭರಿತವನ್ನಾಗಿಸಿ, ಆ ಪರಿಮಳಯುಕ್ತವಾದ
ಸತ್ಫಲದ ಸವಿಜೇನಿನ ತತ್ತ್ವಸುಧೆಯನ್ನು ವಸುಧೆಯೊಳು
ಸುಧೀಜನರು ಆಸ್ವಾದಿಸಿ ಆತ್ಮೋದ್ಧಾರದ ಅನುಭವವನ್ನು
ಹೊಂದಿ, ಆನಂದಿಸುವಂತೆ ಅನುಗ್ರಹಿಸಿ
ಆಶೀರ್ವದಿಸುತ್ತಿರುವ ಅತ್ಯಂತ ದಯಾಳುಗಳಾದ
ಜಗದ್ಗುರು ಶ್ರೀಮದ್ರಾಘವೇಂದ್ರತೀರ್ಥ ಗುರುಸಾರ್ವಭೌಮರ
ಇಪತ್ತೈದು ಶ್ರೇಷ್ಠಗ್ರಂಥಗಳಿಂದ ಸಮಲಂಕೃತವಾದ "ಶ್ರೀ ಗುರುರಾಜಸಂಪುಟಮ್"
ಎಂಬ ಪವಿತ್ರವಾದ ಗ್ರಂಥಪುಷ್ಪವನ್ನು
ಪೂಜ್ಯ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ 75ನೇ ವರ್ಷದ
ವರ್ಧಂತ್ಯುತ್ಸವದ ಸವಿನೆನಪಿಗಾಗಿ ಹಾಗೂ
ಶ್ರೀಸುಯಮಿ ರಾಘವೇಂದ್ರ ಸಂಶೋಧನ ಕೇಂದ್ರದ
ಪಂಚಾದಶ ಸಂಸ್ಥಾಪನಾ ಮಹೋತ್ಸವದ ಸಂಸ್ಮರಣಾರ್ಥವಾಗಿ
ಶ್ರೀರಾಯರ ಪರಮಪಾವನ ಚರಣಕಮಲಗಳಲ್ಲಿ
ಪರಮಪೂಜ್ಯ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ
ಅಮೃತಹಸ್ತಗಳಿಂದ ಸದ್ಭಕ್ತಿ-ಶ್ರದ್ಧಾದರ
ನಮನಪೂರ್ವಕವಾಗಿ ಸಮರ್ಪಿಸಲ್ಪಟ್ಟಿದೆ.



ಶ್ರೀಗುರುರಾಜರ ಚರಣಸೇವಕರು

ಪ್ರಕಾಶಕರು
ಶ್ರೀಸುಯಮೀ-ರಾಘವೇಂದ್ರ ಸಂಶೋಧನ ಕೇಂದ್ರ
ನಂಜನಗೂಡು-ಬೆಂಗಳೂರು

ದಿನಾಂಕ 23-09-2010
ಮಂತ್ರಾಲಯಂ

Rarest Archiver

Rarest Archiver

ಕುಲದೈವ

ಶ್ರೀಶ್ರೀನಿವಾಸದೇವರು

Rarest Archiver

Rarest Archiver

ಆಚಾರ್ಯ ಶ್ರೀಮಧ್ವರು



ಶ್ರೀಜಯತೀರ್ಥರು

Rarest Archiver

Rarest Archiver

ಕುಲಗುರುಗಳು

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು

Rarest Archiver

Rarest Archiver

ಸಂಶೋಧನ ಕೇಂದ್ರದ ಸಾಮ್ರಾಟ್ ಪೋಷಕರು



ಶ್ರೀ ಸುಯಮೀಂದ್ರತೀರ್ಥರು

Rarest Archiver

Rarest Archiver

ಸಾಮ್ರಾಟ್ ಪೋಷಕರು



ಶ್ರೀ ಸುಜಯೀಂದ್ರತೀರ್ಥರು



ಸಾಮ್ರಾಟ್ ಪೋಷಕರು : ಶ್ರೀ ಸುಶಮೀಂದ್ರತೀರ್ಥರು ಹಾಗೂ
ಶ್ರೀ ಸುಯತೀಂದ್ರತೀರ್ಥರು

Rarest Archiver

Rarest Archiver

ಸಂಶೋಧನ ಕೇಂದ್ರದ ಸ್ಫೂರ್ತಿಮೂರ್ತಿಗಳು



ರಾಜಾ. ಶ್ರೀ. ವೇಣುಗೋಪಾಲಾಚಾರ್ಯ



ರಾಜಾ. ಶ್ರೀ. ಗುರುರಾಜಾಚಾರ್ಯ

ರಾಜಾ. ಶ್ರೀ. ಲಕ್ಷ್ಮೀನಾರಾಯಣಾಚಾರ್ಯ



ಡಾ. ಹುಲಿ. ಕೃ. ವೇದವ್ಯಾಸಾಚಾರ್ಯ

Rarest Archiver

Rarest Archiver

ಸಂಶೋಧನ ಕೇಂದ್ರದ ಸಂಸ್ಥಾಪಕರು
"ಶ್ರೀರಾಘವೇಂದ್ರಗುರುವಂಶಭೂಷಣಂ"
ರಾಜಾ. ಶ್ರೀ. ಗುರುರಾಜಾಚಾರ್ಯ

Rarest Archiver

॥ ಶ್ರೀಮೂಲರಾಮೋ ವಿಜಯತೇ ॥ ॥ ಶ್ರೀಗುರುರಾಜೋ ವಿಜಯತೇ ॥

ಶ್ರೀಹಂಸನಾಮಕ ಪರಮಾತ್ಮಪ್ರವರ್ತಿತ ಜ್ಞಾನಪೀಠಾಧ್ಯಕ್ಷರಾದ
ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನಾಧೀಶ್ವರರಾದ
ಶ್ರೀರಾಘವೇಂದ್ರಸ್ವಾಮಿಗಳವರ ಮಠದ ದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ 108 ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರ
ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ 108 ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ
ವರಕುಮಾರಕರಾದ

ಪರಮಪೂಜ್ಯ ಶ್ರೀ 108 ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರ

75 ನೇ ವರ್ಷದ ವರ್ಧಂತ್ಯುತ್ಸವದ ಸವಿನೆನಪಿಗಾಗಿ ಪ್ರಕಾಶಿಸಲ್ಪಟ್ಟ

ಶ್ರೀಗುರುರಾಜರ ಗ್ರಂಥರತ್ನ

॥ ಜೀಯಾತ್ ಶ್ರೀಸುಯತೀಂದ್ರತೀರ್ಥಸಂಯಮಿಮಣೀ ವೇದಾಂತರಾಜ್ಯೇ ಚಿರಮ್ ॥

Rarest Archiver

॥ ಶ್ರೀಃ ॥

॥ ಶ್ರೀಮೂಲರಾಮೋ ವಿಜಯತೇತರಾಮ್ ॥

॥ ಶ್ರೀಗುರುರಾಜೋ ವಿಜಯತೇ ॥

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಮ್

ಶ್ರೀಪುರುಷಸೂಕ್ತವ್ಯಾಖ್ಯಾನಮ್

ಕನ್ನಡಾನುವಾದ :

ವಿದ್ವಾನ್ ಜಿ. ಗುರುವೇಂಕಟಾಚಾರ್ಯ ಎಂ.ಎ.

ಪ್ರಾಸ್ತಾವಿಕ

ವೈದಿಕಸಾಹಿತ್ಯದಲ್ಲಿ ಪುರುಷಸೂಕ್ತವು ಅತ್ಯಂತ ಮಹತ್ವದ ಸ್ಥಾನವನ್ನು ಗಳಿಸಿದೆ. ಗಾಯಿತ್ರೀಮಂತ್ರದ ನಂತರದ ಸ್ಥಾನ ಪುರುಷಸೂಕ್ತಕ್ಕಿದೆ. ಅಕಾರ, ಉಕಾರ, ಮಕಾರಗಳಿಂದ ಕೂಡಿದ ಓಂಕಾರದ ವಿಸ್ತಾರವೇ ಭೂಃ ಭುವಃ ಸ್ವಃ ಎಂಬ ಮೂರು ವ್ಯಾಹೃತಿಗಳು. ಅವುಗಳ ವಿಸ್ತಾರವೇ ತ್ರಿಪಾದಗಳಿಂದ ಕೂಡಿದ ಗಾಯಿತ್ರಿ. ಗಾಯತ್ರಿಯ ವಿಸ್ತಾರವೇ ಮೂರು ವರ್ಗವುಳ್ಳ ಪುರುಷಸೂಕ್ತ, ಪುರುಷಸೂಕ್ತದ ವಿಸ್ತಾರವೇ ಮೂರುವೇದಗಳು. ಕೃಷ್ಣಾವತಾರಕ್ಕೋಸ್ಕರ ಬ್ರಹ್ಮದೇವರು ಭಗವಂತನನ್ನು ಪ್ರಾರ್ಥಿಸಿದ್ದು ಪುರುಷಸೂಕ್ತದಿಂದಲೇ, 'ಪುರುಷಂ ಪುರುಷಸೂಕ್ತೇನ ಉಪತಸ್ಥೇ ಸಮಾಹಿತಃ ।' 'ಆದ್ಯೋಽವತಾರಃ ಪುರುಷಃ ಪರಸ್ಯ' ಎಂದು ಭಾಗವತದಲ್ಲಿ ಹೇಳಿದಂತೆ ಭಗವಂತನ ಮೊದಲ ಅವತಾರ ಪುರುಷ. ಭಗವಂತನ ಪುರುಷಾವತಾರಗಳು ಒಟ್ಟು ಮೂರು.

ಪ್ರಥಮಂ ತು ಮಹತ್ಸ್ರಷ್ಟೃ ದ್ವಿತೀಯಂ ತ್ವಂಡಸಂಸ್ಥಿತಮ್ ।
ತೃತೀಯಂ ದೇಹಿನಾಂ ದೇಹೇ ರೂಪತ್ರಯಮುದಾಹೃತಮ್ ॥

ಮಹತ್ತತ್ವ ಸೃಷ್ಟಿ ಮಾಡಿದ ರೂಪ ಒಂದು; ಬ್ರಹ್ಮಾಂಡದ ಒಳಗಿರುವ ರೂಪ ಮತ್ತೊಂದು, ಎಲ್ಲರ ದೇಹದೊಳಗಿರುವ ರೂಪ ಮಗದೊಂದು. ಈ ಮೂರು ರೂಪಗಳನ್ನು ಪ್ರತಿಪಾದಿಸುತ್ತದೆ ಪುರುಷಸೂಕ್ತ.

ಇದು ಋಗ್ವೇದದ ಹತ್ತನೇ ಮಂಡಲದಲ್ಲಿರುವ ತೊಂಬತ್ತನೆಯ ಸೂಕ್ತ. ಇದು ಕೇವಲ ವಿಷ್ಣುವನ್ನೇ ಪ್ರತಿಪಾದಿಸುವ ವಿಶಿಷ್ಟ ಸೂಕ್ತವಾಗಿದೆ. ಇದು ಅಸಾಧಾರಣವಾಗಿ ವಿಷ್ಣುವನ್ನೇ ಪ್ರತಿಪಾದಿಸುವಂತೆ ಯಾವ ವೇದ ವೇದಾಂಗಗಳೂ ಪ್ರತಿಪಾದಿಸುವುದಿಲ್ಲ, ಆದ್ದರಿಂದ ಇದಕ್ಕೆ ವೇದವೇದಾಂಗಕ್ಕಿಂತ ಹೆಚ್ಚಿನ ಸ್ಥಾನವಿದೆ.

ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ।
ನ ತಥಾ ಸರ್ವವೇದಾಶ್ಚ ವೇದಾಂಗಾನಿ ಚ ಭಾರತ ॥

ಪುರುಷ ಸೂಕ್ತದ ಮತ್ತೊಂದು ವೈಶಿಷ್ಟ್ಯವೆಂದರೇ, ಇದು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ – ಈ ನಾಲ್ಕೂ ವೇದಗಳಲ್ಲಿ ಪಠಿತವಾಗಿದೆ.

Rarest Archiver

ಇದಂ ಹಿ ಪೌರುಷಂ ಸೂಕ್ತಂ ಸರ್ವವೇದೇಷು ಪಠ್ಯತೇ ।
ತತಃ ಶ್ರುತಿಭ್ಯಃ ಸರ್ವಾಭ್ಯಃ ಬಲವತ್ ಸಮುದೀರಿತಮ್ ॥

ಇದು ವಿಶೇಷವಾಗಿ ಭಗವಂತನ ಷೋಡಶೋಪಚಾರ ಪೂಜೆಗಾಗಿ ಇರುವ ಸೂಕ್ತ. ಪುರುಷಸೂಕ್ತದಿಂದ ಶ್ರೀಹರಿಯ ಪೂಜೆ ಮಾಡುವ ಕ್ರಮ ಇಂತಿದೆ.

ಆದ್ಯಯಾಽಽವಾಹಯೇದ್ದೇವಂ ಋಚಾ ತು ಪುರುಷೋತ್ತಮಮ್ ।
ದ್ವಿತೀಯಯಾಽಽಸನಂ ದದ್ಯಾತ್ ಪಾದ್ಯಂ ಚೈವ ತೃತೀಯಯಾ ॥
ಅರ್ಘ್ಯಂ ಚತುರ್ಥ್ಯಾ ದಾತವ್ಯಂ ಪಂಚಮ್ಯಾಽಽಚಮನೀಯಕಮ್ ।
ಷಷ್ಠ್ಯಾ ಸ್ನಾನಂ ಪ್ರಕುರ್ವೀತ ಸಪ್ತಮ್ಯಾ ವಸ್ತ್ರಮೇವ ಚ ॥
ಯಜ್ಞೋಪವೀತಮಷ್ಟಮ್ಯಾ ನವಮ್ಯಾ ಚಾನುಲೇಪನಮ್ ।
ಪುಷ್ಪಂ ದಶಮ್ಯಾ ದಾತವ್ಯಂ ಏಕಾದಶ್ಯಾ ತು ಧೂಪಕಮ್ ॥
ದ್ವಾದಶ್ಯಾ ದೀಪಕಂ ದದ್ಯಾತ್ ತ್ರಯೋದಶ್ಯಾ ನಿವೇದನಮ್ ।
ಚತುರ್ದಶ್ಯಾ ನಮಸ್ಕಾರಂ ಪಂಚದಶ್ಯಾ ಪ್ರದಕ್ಷಿಣಮ್ ॥
ಸ್ನಾನೇ ವಸ್ತ್ರೇ ಚ ನೈವೇದ್ಯೇ ದದ್ಯಾದಾಚಮನೀಯಕಮ್ ।
ದಕ್ಷಿಣಾಂ ತು ಯಥಾಶಕ್ತ್ಯಾ ಷೋಡಶ್ಯಾ ತು ಪ್ರದಾಪಯೇತ್ ॥

1. ಸಹಸ್ರಶೀರ್ಷಾ – ಆವಾಹನೆ
2. ಪುರುಷ ಏವೇದಂ – ಆಸನ
3. ಏತಾವಾನಸ್ಯ – ಪಾದ್ಯ
4. ತ್ರಿಪಾದೂರ್ಧ್ವ – ಅರ್ಘ್ಯ
5. ತಸ್ಮಾದ್ವಿರಾಳ – ಆಚಮನೀಯ
6. ಯತ್ಪುರುಷೇಣ – ಸ್ನಾನ
7. ತಂ ಯಜ್ಞಂ – ವಸ್ತ್ರ
8. ತಸ್ಮಾದ್ಯಜ್ಞಾತ್ ಸರ್ವಹುತಃ ಸಂಭೃತಂ – ಯಜ್ಞೋಪವೀತ
9. ತಸ್ಮಾದ್ಯಜ್ಞಾತ್ ಸರ್ವಹುತ ಋಚಃ – ಲೇಪನ
10. ತಸ್ಮಾದಶ್ವಾ – ಪುಷ್ಪ
11. ಯತ್ಪುರುಷಂ – ಧೂಪ
12. ಬ್ರಾಹ್ಮಣೋಽಸ್ಯ – ದೀಪ
13. ಚಂದ್ರಮಾ ಮಾನಸೋ – ನೈವೇದ್ಯ
14. ನಾಭ್ಯಾ ಆಸೀತ್ – ನಮಸ್ಕಾರ
15. ಸಪ್ತಾಸ್ಯಾಸನ್ – ಪ್ರದಕ್ಷಿಣೆ
16. ಯಜ್ಞೇನ ಯಜ್ಞಂ – ದಕ್ಷಿಣೆ.

ಬೇರೆ ಪ್ರಯೋಜನಗಳಿಗಾಗಿಯೂ ಪುರುಷಸೂಕ್ತವನ್ನು ಪಠಿಸುವ ಕ್ರಮವಿದೆ.

ಪ್ರಾಯಶ್ಚಿತ್ತೇ ಜಪೇ ಚೈವ ವಿಷ್ಣೋರಾರಾಧನೇ ತಥಾ ।
ಮೋಕ್ಷೇ ವಶ್ಯೇಽಗ್ನ್ಯುಪಸ್ಥಾನೇ ಸುಪುತ್ರಪ್ರಾಪಣೇ ತಥಾ ॥
ಸರ್ವಕರ್ಮಫಲಪ್ರಾಪ್ತೌ ಆರೋಗ್ಯೇ ಮೃತ್ಯುನಾಶನೇ ।
ಏತೇಷ್ವರ್ಥೇಷ್ವಿದಂ ಸೂಕ್ತಂ ಮುನಯೋ ವಿನಿಯುಂಜತೇ ॥

Rarest Archiver

1. ಕರ್ಮಲೋಪ ವಿಧಿಲೋಪ ಉಂಟಾದಾಗ ಮಾಡಬೇಕಾದ ಪ್ರಾಯಶ್ಚಿತ್ತ.
2. ಜಪ
3. ವಿಷ್ಣುವಿನ ಆರಾಧನೆ.
4. ಮೋಕ್ಷ
5. ಜಗತ್ತನ್ನು ವಶದಲ್ಲಿಟ್ಟುಕೊಳ್ಳುವುದು
6. ಅಗ್ನಿಯ ಉಪಸ್ಥಾನ.
7. ಸುಪುತ್ರಪ್ರಾಪ್ತಿ
8. ಸರ್ವಾಭೀಷ್ಟಸಿದ್ಧಿ
9. ದೇಹಾರೋಗ್ಯ
10. ಅಕಾಲ ಮೃತ್ಯುನಿವಾರಣೆ

ಈ ಪ್ರಯೋಜನಗಳಿಗಾಗಿ ಪುರುಷಸೂಕ್ತವನ್ನು ಮುನಿಗಳು ವಿನಿಯೋಗಿಸುತ್ತಾರೆ.

ಈ ಸೂಕ್ತದಲ್ಲಿ 'ತಸ್ಮಾದ್ವಿರಾಳಜಾಯತ' ಇತ್ಯಾದಿ ಮಂತ್ರಗಳಿಂದ ಪರಮ ಪುರುಷನಿಂದಾದ ಬ್ರಹ್ಮಾಂಡ ಸೃಷ್ಟಿಯನ್ನು ವರ್ಣಿಸಿದ್ದಾರೆ. ಆ ಪರಮ ಪುರುಷನು 'ಅಶರೀರಃ ಪ್ರಜ್ಞಾತ್ಮಾ' ಇತ್ಯಾದಿ ಶ್ರುತಿಗಳಿಂದ ಶರೀರರಹಿತ ಎಂದು ಪ್ರತಿಪಾದಿಸಲ್ಪಟ್ಟಿದ್ದಾನೆ. ಆದ್ದರಿಂದ ಶರೀರವಿಲ್ಲದೇ ಸೃಷ್ಟಿಯನ್ನು ಹೇಗೆ ಮಾಡಿಯಾನು? ಎಂದು ಸಂಶಯ ಬರುತ್ತದೆ. ಅದರ ಪರಿಹಾರಕ್ಕಾಗಿ 'ಸಹಸ್ರಶೀರ್ಷಾ' ಇತ್ಯಾದಿಯಾಗಿ ಭಗವಂತನಿಗೆ ಭವ್ಯವಾದ ಶರೀರವಿದೆ. ಎಂದು ಹೇಳಲಾಗಿದೆ. ಆದರೆ ಆ ಶರೀರ ಮಾತ್ರ ಪ್ರಾಕೃತವಲ್ಲ ಏಕೆಂದರೆ ಅವನು ಪ್ರಕೃತಿಯನ್ನು ಮೀರಿದವನು 'ಸ ಭೂಮಿಂ ವಿಶ್ವತೋ ವೃತ್ವಾ ಅತ್ಯತಿಷ್ಠದ್ದಶಾಂಗುಲಮ್' ಎಂಬುದಾಗಿ ಅವನ ಈ ಮಹಿಮೆಯೂ ವರ್ಣಿತವಾಗಿದೆ.

ಅನಂತರದಲ್ಲಿ ಬ್ರಹ್ಮಾಂಡ ಸೃಷ್ಟಿಯಾದ ಬಳಿಕ ಅದರಲ್ಲಿ ಜನಿಸಿದ ದೇವತೆಗಳು ಚತುರ್ಮುಖ ಬ್ರಹ್ಮನನ್ನು ಪಶುವನ್ನಾಗಿ ಸಂಕಲ್ಪಿಸಿ ಮಾನಸಯಜ್ಞದಿಂದ ವಿಷ್ಣುವಿನ ಆರಾಧನೆ ಮಾಡಿದ ಬಗೆಯನ್ನೂ, ಅದರಿಂದ ಪ್ರೀತನಾದ ವಿಷ್ಣುವಿನಿಂದ ಮಾಡಲಟ್ಟ ಬಾಹ್ಯಯಜ್ಞಸಾಧನದ್ರವ್ಯಸೃಷ್ಟಿಯನ್ನೂ ವರ್ಣಿಸಿದ್ದಾರೆ.

'ಮುಖಂ ಕಿಮಸ್ಯ' ಇತ್ಯಾದಿ ಮಂತ್ರಗಳಲ್ಲಿ ಮಾನಸ ಯಜ್ಞದಲ್ಲಿ ದೇವತೆಗಳು ಭಗವಂತನನ್ನು ಚಿಂತಿಸಿದ ಪ್ರಕಾರವನ್ನೂ ವರ್ಣಿಸಿ, ಕೊನೆಯಲ್ಲಿ ಭಗವದಾರಾಧಕರಾದ ದೇವತೆಗಳಿಗೆ ಮುಕ್ತಿರೂಪಫಲ ದೊರೆತದ್ದನ್ನು ವರ್ಣಿಸಲಾಗಿದೆ.

ಈ ಸೂಕ್ತಕ್ಕೆ ಮಂತ್ರಾಲಯಪ್ರಭುಗಳು ವಿಶಿಷ್ಟವಾದ ವ್ಯಾಖ್ಯಾನವನ್ನು ರಚಿಸಿದ್ದಾರೆ. ಅದಕ್ಕನುಗುಣವಾಗಿ ಮೊದಲು ಮಂತ್ರಗಳ ಭಾವಾನುವಾದವನ್ನು ಮಾಡಿ ಬಳಿಕ ವಿಶೇಷ ವಿಚಾರ ಎಂಬ ಶೀರ್ಷಿಕೆಯಲ್ಲಿ ರಾಯರ ವ್ಯಾಖ್ಯಾನದ ಸಾರವನ್ನು ಪ್ರಮೇಯಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿ ಕೊಡಲಾಗಿದೆ.

ಪುರುಷಸೂಕ್ತವ್ಯಾಖ್ಯಾನಮ್

ನತ್ವಾ ನಾರಾಯಣಂ ದೇವಂ ಪೂರ್ಣಬೋಧಾನ್ ಗುರೂನಪಿ ।
ವ್ಯಾಖ್ಯಾಸ್ಯಾಮಿ ಯಥಾಬೋಧಂ ಪೌರುಷಂ ಸೂಕ್ತಮುತ್ತಮಮ್ ॥

ಕಥಮುತ್ತಮತಾಽಸ್ಯ ಸೂಕ್ತಸ್ಯೇತಿ ಚೇತ್, ಪರಮಪುಮರ್ಥರೂಪಮುಕ್ತಿಹೇತುಜ್ಞಾನವಿಷಯ ಪುರುಷಶಬ್ದಿತ-ಸರ್ವೋತ್ತಮ-ವಿಷ್ಣುಪ್ರತಿಪಾದಕತಯಾ ಅತ್ಯುತ್ತಮವಿಷಯಪ್ರಯೋಜನವತ್ತ್ವಾದಿತಿ ಬ್ರೂಮಃ ।

Rarest Archiver

ನನು ಕಥಮಸ್ಯ ವಿಷ್ಣುಪ್ರತಿಪಾದಕತಾ ‘ಯತ್ಪುರುಷೇಣ ಹವಿಷಾ’ ಇತಿ ‘ಅಬಧ್ನನ್ ಪುರುಷಂ ಪಶುಮ್’ ಇತಿ ಚ ಪಶುಪುರುಷಸ್ಯೈವಾತ್ರ ಪ್ರತಿಪಾದ್ಯತ್ವಪ್ರತೀತೇಃ ‘ಪುರುಷ ಏವೇದಂ ಸರ್ವಂ’ ಇತ್ಯುಕ್ತಸರ್ವಾತ್ಮಕಸ್ಯ, ದೇಹಯೋಗವಶಾತ್ ಭೂತಭವ್ಯತ್ವಾದೇಶ್ಚ ಪಶ್ವಾವಿವ ವಿಷ್ಣಾವಯೋಗಾಚ್ಚ , ನ ಚ ತತ್ಪ್ರತಿಪಾದನಂ ವ್ಯರ್ಥಮ್, ತಸ್ಯ ಪಶುಪತೇರ್ಮಹಾದೇವಸ್ಯ ಪ್ರೀತಿಹೇತುತ್ವಾದಿತಿ ಚೇತ್ ‘ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾದಿತ್ಯೇಷ ಹ್ಯೇವಾಚಿಂತ್ಯಃ ಪರಃ ಪರಮೋ ಹರಿಃ’ ಇತ್ಯೇತತ್ಸೂಕ್ತಪ್ರತೀಕಪೂರ್ವಂ ತಸ್ಯ ವೈಷ್ಣವತ್ವೋಕ್ತಿಪರಶ್ರುತಿವಿರೋಧಾತ್ । ‘ಯಥೈವ ಪೌರುಷಂ ಸೂಕ್ತಂ ನಿತ್ಯಂ ವಿಷ್ಣುಪರಾಯಣಮ್ । ತಥೈವ ಮೇ ಮನೋ ನಿತ್ಯಂ ಭೂಯಾದ್ವಿಷ್ಣುಪರಾಯಣಮ್’ ಇತಿ ಬ್ರಾಹ್ಮಸ್ಮೃತ್ಯಾ ‘ತಸ್ಮಿನ್ಕಾಲೇ ಮಹಾರಾಜಾ ರಾಮ ಏವಾಭಿಧೀಯತೇ । ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ’ ಇತಿ ಸ್ಕಾಂದಸ್ಮೃತ್ಯಾ ಚ ವಿರೋಧಾತ್ । ಅತ್ರ ಸೂಕ್ತೇ ವಿಷ್ಣುಸಾಧಾರಣಶ್ರುತಿಲಿಂಗಾನಾಂ ವಕ್ಷ್ಯಮಾಣತ್ವೇನ ತದ್ವಿರೋಧಾಚ್ಚ । ‘ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ । ನ ತಥಾ ಸರ್ವವೇದಾಶ್ಚ ವೇದಾಂಗಾನಿ ಚ ನಾರದ’ ಇತಿ ಸ್ಮೃತಾವಿತರವ್ಯವಚ್ಛೇದಪೂರ್ವಂ ವೇದಾದಿಭ್ಯೋऽತಿಶಯೇನ ವಿಷ್ಣೋರೇವ ಪ್ರತಿಪಾದ್ಯತ್ವೋಕ್ತ್ಯಾ ತನ್ಮಧ್ಯಗತಸ್ಯ ‘ಯತ್ಪುರುಷೇಣ ಹವಿಷಾ’ ಇತ್ಯಾದೇರನ್ಯಥಾ ವ್ಯಾಖ್ಯೇಯತ್ವಾಚ್ಚ । ತಥಾ ಚ ತತ್ರೈವ ವ್ಯಾಖ್ಯಾಸ್ಯಾಮಃ ॥

‘ಯೋ ಹ ವಾ ಅವಿದಿತಾರ್ಷಚ್ಛಂದೋದೈವತ’ ಇತ್ಯಾದೇಃ ಛಂದೋದೇವತಾದಿ ಜ್ಞಾನಮಾವಶ್ಯಕಮಿತಿ ತದುಚ್ಯತೇ । ‘ಸಹಸ್ರಶೀರ್ಷಾ ಷೋಡಶ ನಾರಾಯಣಃ ಪೌರುಷಮನುಷ್ಟುಭಂ ತ್ರೈಷ್ಟುಭಮಂತ್ಯಮ್’ ಇತ್ಯನುಕ್ರಮಣಿಕೋಕ್ತ್ಯಾ ನಾರಾಯಣ ಋಷಿಃ, ಅನುಷ್ಟುಪ್ ಛಂದಃ, ಅಂತ್ಯಾ ಋಕ್ ತ್ರಿಷ್ಟುಪ್ । ತಂತ್ರಸಾರೇ ತು ‘ತಾರವನ್ನಿಖಿಲಂ ಸ್ಮೃತಮ್ । ಪಂಚಾಶದಕ್ಷರಾಣಾಂ ಚ ಪುಂಸೂಕ್ತಸ್ಯಾಪಿ ಸರ್ವಶಃ । ಅನುಷ್ಟುಭಶ್ಚ ತ್ರಿಷ್ಟುಪ್ ಚ ಛಂದೋऽಸ್ಯ ತ್ರಿಷ್ಟುಭೋऽಪಿ ವಾ’ ಇತ್ಯುಕ್ತ್ಯಾ ಅಂತರ್ಯಾಮೀ ಋಷಿಃ ಜ್ಞೇಯಃ । ಛಂದೋಭಿಮಾನಿದೇವತಾ ತು ‘ಬ್ರಹ್ಮಣ್ಯನುಷ್ಟುಬಿಂದ್ರಾಣೀ ತ್ರಿಷ್ಟುಪ್ ಸ್ವಾಹೇತಿ ಚೋಚ್ಯತೇ’ ಇತಿ ಋಗ್ಭಾಷ್ಯೋಕ್ತಾ ಧ್ಯೇಯಾ । ಸೂಕ್ತದೇವತಾ ತು ಭಗವಾನ್ ಪುರುಷನಾಮಾ ಹರಿರೇವೇತಿ । ಷೋಡಶರ್ಚಮಿದಂ ಸೂಕ್ತಂ ವರ್ಗತ್ರಯಾತ್ಮಕಮ್ । ತತ್ರ ‘ಜಗೃಹೇ ಪೌರುಷಂ ರೂಪಂ ಭಗವಾನ್ ಮಹದಾದಿಭಿಃ । ಸಂಭೂತಂ ಷೋಡಶಕಲಮಾದೌ ಲೋಕಸಿಸೃಕ್ಷಯಾ’ ಇತ್ಯುಕ್ತದಿಶಾ ಪುರುಷರೂಪಾದ್ ಬ್ರಹ್ಮಾಂಡಾದಿಸೃಷ್ಟಿಂ ‘ತಸ್ಮಾದ್ವಿರಾಳಜಾಯತ’ ಇತ್ಯಾದಿನಾ ವಕ್ತುಂ ‘ನ ಚ ಕರ್ತುಃ ಕರಣಮ್’ ಇತ್ಯಾದಿ ಸೂತ್ರೋಕ್ತರೀತ್ಯಾ ಹಸ್ತಪಾದಾದಿಮಚ್ಛರೀರಹೀನಸ್ಯ ಸ್ರಷ್ಟೃತ್ವಾಯೋಗಾತ್ ತದುಪಯೋಗಿತಯಾ ದಿವ್ಯವಿಗ್ರಹವತ್ತ್ವಮಹಿಮಾನಮಾದಾವಾಹ- ಸಹಸ್ರಶೀರ್ಷೇತಿ ।

ಕನ್ನಡ ಭಾವಾನುವಾದ

ಶ್ರೀಮನ್ನಾರಾಯಣನನ್ನು ಶ್ರೀಪೂರ್ಣಬೋಧಾದಿಗುರುಗಳನ್ನೂ ನಮಸ್ಕರಿಸಿ ಉತ್ತಮವಾದ ಪುರುಷಸೂಕ್ತವನ್ನು ಯಥಾಮತಿ ವ್ಯಾಖ್ಯಾನ ಮಾಡುತ್ತೇನೆ.

Rarest Archiver

ಈ ಪುರುಷಸೂಕ್ತವು ಉತ್ತಮ ಏಕೆಂದರೆ ಪರಮ ಪುರುಷಾರ್ಥಮುಕ್ತಿಹೇತು ಭೂತನಾದ ಸರ್ವೋತ್ತಮ ವಿಷ್ಣುವನ್ನು ಪ್ರತಿಪಾದಿಸುತ್ತದೆ. ಹೀಗೆ ಅತ್ಯುತ್ತಮ ವಿಷಯ ಮತ್ತು ಪ್ರಯೋಜನ ಉಳ್ಳದ್ದಾದ್ದರಿಂದ ಇದು ಉತ್ತಮವಾಗಿದೆ.

ಈ ಸೂಕ್ತದಲ್ಲಿ 'ಯತ್‌ಪುರುಷೇಣ ಹವಿಷಾ' ಎಂಬುದಾಗಿ ಮತ್ತು 'ಅಬಧ್ನನ್ ಪುರುಷಂ ಪಶುಮ್' ಎಂಬುದಾಗಿ ಪಶುಪುರುಷನನ್ನೆ ಪ್ರತಿಪಾದಿಸಿದ್ದರಿಂದ ವಿಷ್ಣುವು ಹೇಗೆ ಪ್ರತಿಪಾದ್ಯ ? 'ಪುರುಷ ಏವೇದಂ ಸರ್ವಂ' ಎಂಬುದಾಗಿ ಹೇಳಲ್ಪಟ್ಟ ಸರ್ವ ಸ್ವರೂಪತ್ವ ಮತ್ತು 'ಯದ್ಭೂತಂ ಯಚ್ಚ ಭವ್ಯಮ್' ಎಂಬುದಾಗಿ ಹೇಳಲ್ಪಟ್ಟ ದೇಹಾಧೀನವಾಗಿ ಬರತಕ್ಕ ಭೂತತ್ವ ಭವಿಷ್ಯತ್ವಗಳು ವಿಷ್ಣುವಿನಲ್ಲಿ ಹೇಗೆ ಕೂಡುತ್ತವೆ ? ಆದ್ದರಿಂದ ಪಶುಪತಿಯಾದ ಮಹಾದೇವನ ಪ್ರೀತಿಗಾಗಿ ಪಶುಪುರುಷನೇ ಇಲ್ಲಿ ಪ್ರತಿಪಾದ್ಯ ಎಂದು ಕೆಲವರು ಹೇಳುತ್ತಾರೆ.

ಆದರೆ ಇದು ಸರಿಯಲ್ಲ. 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾದಿತಿ, ಏಷ ಹ್ಯೇವ ಅಚಿಂತ್ಯಃ ಪರಃ ಪರಮೋ ಹರಿಃ' ಎಂಬುದಾಗಿ ಶ್ರುತಿಯು ಈ ಸೂಕ್ತದ ಮೊದಲನೆಯ ಋಕ್ಕಿನಲ್ಲಿ ಉಲ್ಲೇಖಪೂರ್ವಕವಾಗಿ ಈ ಸೂಕ್ತಕ್ಕೆ ವೈಷ್ಣವತ್ವವನ್ನು ಹೇಳುತ್ತಿದೆ.

"ಯಥೈವ ಪೌರುಷಂ ಸೂಕ್ತಂ ನಿತ್ಯಂ ವಿಷ್ಣುಪರಾಯಣಮ್ ।"

ಎಂಬ ಬ್ರಾಹ್ಮಸ್ಮೃತಿಯು, ಮತ್ತು

"ತಸ್ಮಿನ್ ಕಾಲೇ ಮಹಾರಾಜಾ ರಾಮ ಏವಾಭಿಧೀಯತೇ ।
ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ ॥"

ಎಂಬ ಸ್ಕಾಂದ ಸ್ಮೃತಿಯು ಪುರುಷ ಸೂಕ್ತವನ್ನು ವಿಷ್ಣುಪರ ಎಂದು ಹೇಳುತ್ತಿದೆ.

"ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ।
ನ ತಥಾ ಸರ್ವವೇದಾಶ್ಚ ವೇದಾಂಗಾನಿ ಚ ನಾರದ ॥"

ಎಂಬ ಸ್ಮೃತಿಯಿಂದಲೂ ಪುರುಷಸೂಕ್ತವು ವೇದಾದಿಗಳಿಗಿಂತಲೂ ಅತಿಶಯವಾಗಿ ವಿಷ್ಣುಪ್ರತಿಪಾದಕವಾಗಿದೆ ಎಂದು ಸಿದ್ಧವಾದ್ದರಿಂದ 'ಯತ್ಪುರುಷೇಣ ಹವಿಷಾ' ಇತ್ಯಾದಿ ವಾಕ್ಯಗಳಿಗೆ ಅರ್ಥಾಂತರವನ್ನು ಮಾಡಬೇಕು. ಅದನ್ನು ಅಲ್ಲಿಯೇ ವಿವರಿಸಲಾಗುವುದು.

'ಯೋ ಹ ವಾ ಅವಿದಿತ....' ಇತ್ಯಾದಿ ವಚನದಂತೆ ಋಷಿ ಛಂದಸ್ಸು ದೇವತೆಗಳ ಜ್ಞಾನವು ಆವಶ್ಯಕವಾದುದರಿಂದ ಅವನ್ನು ತಿಳಿಯಬೇಕು. ನಾರಾಯಣನೇ ಋಷಿಯು. ಅನುಷ್ಟುಪ್ ಛಂದಸ್ಸು ಕೊನೆಯ ಋಕ್‌ಗೆ ತ್ರಿಷ್ಟುಪ್ ಛಂದಸ್ಸು 'ತಾರವನ್ನಿಖಿಲಂ ಸ್ಮೃತಮ್ । ಪಂಚಾಶದಕ್ಷರಾಣಾಂ ಚ ಪುಂಸೂಕ್ತಸ್ಯಾಪಿ ಸರ್ವಶಃ' ಇತ್ಯಾದಿಯಾಗಿ ತಂತ್ರಸಾರದಲ್ಲಿ ಹೇಳಿದಂತೆ ಅಂತರ್ಯಾಮಿಯು ಋಷಿಯೆಂದೂ ತಿಳಿಯಬಹುದು. ಅನುಷ್ಟುಪ್ ಛಂದಸ್ಸಿಗೆ ಸರಸ್ವತಿಯು ಅಭಿಮಾನಿ-ದೇವತೆ. ತ್ರಿಷ್ಟುಪ್ ಛಂದಸ್ಸಿಗೆ ಶಚಿಯು ಅಭಿಮಾನಿ ದೇವತೆ. ಈ ಸೂಕ್ತದ ಪ್ರತಿಪಾದ್ಯ ದೇವತೆಯು ಪುರುಷನಾಮಕ ನಾರಾಯಣನು. ಈ ಸೂಕ್ತದಲ್ಲಿ 16 ಋಕ್‌ಗಳು, 3 ವರ್ಗಗಳು. 'ಜಗೃಹೇ ಪೌರುಷಂ ರೂಪಂ' ಎಂಬುದಾಗಿ ಭಾಗವತದಲ್ಲಿ ಹೇಳಿದಂತೆ ಪುರುಷರೂಪದಿಂದ ಆಗಿರುವ ಬ್ರಹ್ಮಾಂಡಾದಿ ಸೃಷ್ಟಿಯನ್ನು 'ತಸ್ಮಾದ್ವಿರಾಳಜಾಯತ' ಇತ್ಯಾದಿಯಾಗಿ ವರ್ಣಿಸಲು ಆರಂಭದಲ್ಲಿ ಶರೀರವಿಲ್ಲದೇ ಸೃಷ್ಟ್ಯಾದಿಗಳು ಕೂಡುವುದಿಲ್ಲವಾದ್ದರಿಂದ ದಿವ್ಯ-ಶರೀರವತ್ತ್ವ-ರೂಪವಾದ ಮಹಾಮಹಿಮೆಯನ್ನು ಹೇಳಲಾಗಿದೆ.

Rarest Archiver

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾಽತ್ಯತಿಷ್ಠದ್ದಶಾಂಗುಲಮ್ ॥

ಎಲ್ಲರ ದೇಹದೊಳಗಿರುವ ಪುರುಷನಾಮಕ ವಿಷ್ಣುವು ಸಾವಿರಾರು ತಲೆಯುಳ್ಳವನು, ಸಾವಿರಾರು ಕಣ್ಣು-ಗಳುಳ್ಳವನು, ಸಾವಿರಾರು ಕಾಲುಗಳುಳ್ಳವನು. ಅವನು ಎಲ್ಲಡೆಯೂ ವ್ಯಾಪಿಸಿ ಭೂಮಿ ಶಬ್ದವಾಚ್ಯ ಪ್ರಕೃತ್ಯಭಿಮಾನಿ ದೇವತೆಯಾದ ಲಕ್ಷ್ಮೀದೇವಿಯನ್ನು ಅಪರಿಮಿತವಾಗಿ ಮೀರಿ ನಿಂತಿದ್ದಾನೆ.

ಪುರುಷಶಬ್ದೋ ಹಿ 'ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯೋ ನೈನೇನ ಕಿಂಚ ನಾನಾವೃತಮ್' ಇತಿ ಶ್ರುತೌ ಪೂರ್ಷು ದೇಹೇಷು ಪುರಿಶಯೋ ಹೃದಯೇ ಶಯೋ ವರ್ತಮಾನ ಇತಿ, 'ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪುರುಷಃ' ಇತಿ ದ್ವಿತೀಯಸ್ಕಂಧೇ ಚ ಸರ್ವಾಂತರ್ಯಾಮಿತಯಾ ಪುರುಷಪದವಾಚ್ಯತ್ವೋಕ್ತೇಃ ತಥಾ ಪ್ರಾಗುಕ್ತಶ್ರುತಿಶೇಷೇ 'ಪರಃ ಪರಮೋ ಹರಿಃ ಪುರುಷಃ' ಇತಿ 'ಪುರುಷೋ ಹ ವೈ ನಾರಾಯಣಃ' ಇತಿ ಶ್ರುತೌ 'ಪುರುಷಃ ಪರ ಆತ್ಮಾಽಜೋ ಬ್ರಹ್ಮ ನಾರಾಯಣಃ ಪ್ರಭುಃ' ಇತ್ಯಾದೌ ಶ್ರುತೌ ಚ ಪ್ರಯೋಗಾತ್, 'ಪುರುಷವಿಧಮಪಿ ಚೈನಮಧೀಯತೇ' ಇತಿ ಸೂತ್ರಕೃತಾ ಪುರುಷಸೂಕ್ತಸಮಾಖ್ಯಯಾ ವೈಶ್ವಾನರವಿದ್ಯಾಯಾಃ ವೈಷ್ಣವ-ತ್ವೋಕ್ತೇಶ್ಚ ವಿಷ್ಣೌ ಮುಖ್ಯಃ । ಸಹಸ್ರಶಬ್ದೋಽತ್ರಾನಂತವಾಚೀ, ಪ್ರಾಗುಕ್ತಶ್ರುತಿಶೇಷೇ 'ಪರಮೋ ಹರಿರಾದಿರನಂತೋಽನಂತಶೀರ್ಷೋಽನಂತಾಕ್ಷೋಽನಂತಬಾಹುರನಂತಗುಣಃ' ಇತ್ಯುಕ್ತೇಃ । ತಥಾ ಚ ಅನಂತಾನಿ ಶೀರ್ಷಾಣಿ ಅನಂತಾನ್ಯಕ್ಷೀಣಿ ಅನಂತಾಃ ಪಾದಾಃ ಅನಂತಬಾಹವ ಇತ್ಯುಪಲಕ್ಷಣಂ ಯಸ್ಯ ಸ ತಥಾ ಅನಂತಶೀರ್ಷಾದಿರಿತ್ಯರ್ಥಃ ।

ಪಾದಶಬ್ದಸ್ಯ 'ಸಂಖ್ಯಾಸುಪೂರ್ವಸ್ಯ' ಇತ್ಯಂತಲೋಪಃ । ನನ್ವೇವಂ 'ಅಶರೀರಃ ಪ್ರಜ್ಞಾತ್ಮಾ' ಇತ್ಯಾದಿಶ್ರುತ್ಯಾ 'ಅರೂಪವದೇವ ಹಿ ತತ್ಪ್ರಧಾನತ್ವಾತ್' ಇತಿ ಸೂತ್ರೇಣ ಚ ವಿರೋಧ ಇತಿ ಚೇನ್ನ । ಶ್ರುತ್ಯಾದೇಃ ಪ್ರಾಕೃತರೂಪಾಭಾವಪರತ್ವಾತ್ । 'ವಿಕರಣತ್ವಾನ್ನೇತಿ ಚೇತ್ತದುಕ್ತಮ್' ಇತಿ ಸೂತ್ರೇಣ ಪಾಣಿಪಾದಾದಿ ಕರಣಾಭಾವೇನ ಸ್ರಷ್ಟೃತ್ವಾನುಪಪತ್ತಿಮಾಶಂಕ್ಯಾಪ್ರಾಕೃತಕರಣಾನಾಮುಕ್ತೇಶ್ಚ ।

ಅತೋಽಸ್ಯ ಪುರುಷಸ್ಯ ಪ್ರಕೃತ್ಯತೀತತ್ವಾದಪ್ರಾಕೃತವಿಗ್ರಹ ಇತಿ ಭಾವೇನ ತಸ್ಯ ಪ್ರಕೃತ್ಯತೀತತ್ವಮಾಹ ಸ ಭೂಮಿಮಿತಿ । 'ಯತ್ಕಿಂಚ ಜಗತ್ಯಾಂ ಜಗತ್' ಇತಿ ಈಶಾವಾಸ್ಯೇ ಜಗತೀಶಬ್ದ ಇವಾತ್ರ ಭೂಮಿಶಬ್ದಃ ಸರ್ವಾಧಾರತ್ವಸಾಮ್ಯೇನ ವಾ ಭವತ್ಯತ್ರ ಜಗದಿತಿ ಔಣಾದಿಕ 'ಇ'ಪ್ರತ್ಯಯಾಂತತಯಾ ಯೋಗೇನ ವಾ ಪ್ರಕೃತಿಪರಃ । ಪ್ರಕೃತಿಃ ಇತಿ ವಾಚ್ಯೇ ಭೂಮಿಃ ಇತ್ಯುಕ್ತೇಃ ಭೂಮ್ಯುಪಚಿತಪಂಚಭೂತಾತ್ಮಕವಿಗ್ರಹೋಽಪಿ ಲೌಕಿಕಾನಾಮಿವ ನೇತಿ ವಕ್ತುಂ ಭೂತಾತೀತತ್ವಸ್ಯಾಪಿ ಪ್ರದರ್ಶನಾಯ, 'ಭೌತಿಕಾನಿ ಹಿ ರೂಪಾಣಿ ಭೂತೇಭ್ಯೋಽಸೌ ಪರೋ ಯತಃ' ಇತಿ ಮಾತ್ಸ್ಯವಚನಾತ್ । ಸ ಪುರುಷಃ ಭೂಮಿಂ ಪ್ರಕೃತಿಂ

Rarest Archiver

ಪಂಚಭೂತಾದಿ ವಾ ಅತ್ಯತಿಷ್ಠತ್ ಅತಿಕ್ರಮ್ಯ ವರ್ತತೇ, ಸರ್ವದಾ ತದತಿಕ್ರಾಂತಃ ತದಸ್ಪೃಷ್ಟ ಏವ ವರ್ತತ ಇತ್ಯರ್ಥಃ 'ಆದಿತ್ಯವರ್ಣಂ ತಮಸಃ ಪರಸ್ತಾತ್' ಇತಿ ಶ್ರುತೇಃ । ಅತೀತ್ಯ ತಿಷ್ಠತಿ ಇತ್ಯತ್ರ ಕಿಯದ್ದೂರ-ಮಿತ್ಯಾಕಾಂಕ್ಷಾಯಾಮುಕ್ತಂ ದಶಾಂಗುಲಮಿತಿ । ದಶ ಅಂಗುಲಯಃ ಪರಿಮಾಣಸ್ಯೇತಿ ದಶಾಂಗುಲಮ್ । 'ತತ್ಪುರುಷಸ್ಯಾಂಗುಲೇಃ ಸಂಖ್ಯಾವ್ಯಯಾದೇಃ' ಇತ್ಯಂಗುಲಶಬ್ದಾದಚ್‌ಪ್ರತ್ಯಯಃ । 'ದಶೇತಿ ಸರ್ವಂ' ಇತ್ಯೈತರೇಯಶ್ರುತೌ ಸರ್ವಸಂಖ್ಯಾನಾಂ ದಶಸಂಖ್ಯಾಂತರ್ಭಾವಸ್ಯೋಕ್ತೇಃ । ಅಪರಿಮಿತದೇಶಕಾಲ-ವ್ಯವಧಾನೇನಾತ್ಯತಿಷ್ಠದಿತ್ಯರ್ಥಃ । ಕಸ್ಮಿನ್ನಪಿ ದೇಶೇ ಕಸ್ಮಿನ್ನಪಿ ಕಾಲೇ ಪ್ರಕೃತ್ಯನತಿಕ್ರಮೋ ನೇತಿ ಭಾವಃ । ತತ್ರ ಹೇತುಃ ವಿಶ್ವತೋ ವೃತ್ವೇತಿ । ಪ್ರಕೃತಿಂ ವಿಶ್ವತಃ ಸರ್ವತ್ರ ಬಹಿರಂತಶ್ಚ ವೃತ್ವಾ ಆವೃತ್ಯ ಪ್ರಕೃತೇಃ ಸತ್ತಾದಿ-ಪರಿಣಾಮಾದಿಪರತ್ವಹೇತುನಾ ಪ್ರಕೃತಿಮಭಿವ್ಯಾಪ್ಯೇತ್ಯರ್ಥಃ, ತಾಂ ವಶೀಕೃತ್ಯೇತಿ ಯಾವತ್, ಅತೋ-ಽತ್ಯತಿಷ್ಠದಿತಿ । ತಥಾ ಚ ಭಾಷ್ಯಂ 'ಪ್ರಕೃತ್ಯಾದಿಪ್ರವರ್ತಕತ್ವೇನ ತದುತ್ತಮತ್ವಾದರೂಪವದೇವ' ಇತಿ । ಏತೇನ ಪ್ರಾಕ್ ಪುರುಷಪದೇನ ಸರ್ವಪ್ರಾಣಿಹೃದಯಗುಹಾಸ್ಥಿತತ್ವೇನ ಅಂತರ್ಯಾಮಿತಯಾ ಪುರುಷ-ತ್ವೋಕ್ತ್ಯಾ ಪ್ರಾಪ್ತಾ ವ್ಯಾಪ್ತತತ್ವಶಂಕಾಪಾಸ್ತಾ । ಯದ್ವಾ 'ಸರ್ವಾಸು ಪೂರ್ಷು ಪುರಿ ಶಯಃ' ಇತಿ ಶ್ರುತ್ಯಾ ಅಂತರ್ಯಾಮಿತಯಾ ಪುರುಷಪದಾರ್ಥತ್ವೋಕ್ತಾವವ್ಯಾಪ್ತತ್ವಶಂಕಾಯಾಂ ತಾಂ ನಿರಸಿತುಂ ಪ್ರಾಪ್ತಂ--ಸ ಭೂಮಿಮಿತ್ಯಾದಿ । 'ತೇನೇದಮಾವೃತಂ ವಿಶ್ವಂ ವಿತಸ್ತಿಮಧಿತಿಷ್ಠತಾ' ಇತ್ಯಾದಿ ದ್ವಿತೀಯಸ್ಕಂಧ-ಷಷ್ಠಾಧ್ಯಾಯೇ 'ವಿತಸ್ತಿಮಾತ್ರಂ ಹೃದಯಮಾಸ್ಥಾಯ ವ್ಯಾಪ್ನುತೇ ಜಗತ್' ಇತಿ ತತ್ತಾತ್ಪರ್ಯೋಕ್ತ-ಗಾರುಡಸ್ಮೃತ್ಯುಕ್ತರೀತ್ಯಾ 'ದಶಾಂಗುಲಂ ದಶಾಂಗುಲಪರಿಮಾಣವಿತಸ್ತಿಮಾತ್ರಪರಿಮಿತಂ' ಪ್ರಾಣಿನಾಂ ಹೃದಯಂ ಸಃ ಪುರುಷಃ ಅತ್ಯತಿಷ್ಠತ್ ಅಧಿತಿಷ್ಠವಾನ್ । ಕಥಮ್ ? 'ಭೂಮಿಂ' ಪ್ರಕೃತ್ಯಾದಿ ಜಗತ್ ವಿಶ್ವತಃ ಸರ್ವತ್ರ 'ವೃತ್ವಾ' ಆವೃತ್ಯ ವ್ಯಾಪ್ಯೇತಿ ಯಾವತ್ । ವ್ಯಾಪ್ತಿಂ ಅವಿಹಾಯೈವ ಹೃದಯೇ ಸಮಾಸ್ಥಿತವಾ-ನಿತ್ಯರ್ಥಃ । 'ಏಷ ಮ ಆತ್ಮಾಂತರ್ಹೃದಯೇ ಜ್ಯಾಯಾನ್' ಇತಿ ಶ್ರುತೇರಿತಿ ॥ 1 ॥

ವಿಶೇಷ ವಿಚಾರ – ಪುರುಷಃ 'ಸವಾ ಅಯಂ' ಎಂಬ ಶ್ರುತಿಯಲ್ಲಿ ಪೂರ್ಷು ಪುರಿ ಶಯಃ (ಎಲ್ಲರ ದೇಹದಲ್ಲಿ ಹೃದಯದಲ್ಲಿ ಇರುವವನು) ಎಂದು ಪುರುಷ ಶಬ್ದಕ್ಕೆ ನಿಷ್ಪತ್ತಿಯನ್ನು ತೋರಿಸಿದ್ದಾರೆ. 'ಭೂತೈರ್ಮಹದ್ಭಿಃ' ಎಂಬ ಭಾಗವತ ದ್ವಿತೀಯ ಸ್ಕಂಧ ಶ್ಲೋಕದಲ್ಲಿಯೂ ಇದೇ ತರನಾಗಿ ನಿಷ್ಪತ್ತಿ ತೋರಿಸಿದ್ದಾರೆ.

'ಪರಃ ಪರಮೋ ಹರಿಃ ಪುರುಷಃ' 'ಪುರುಷೋ ಹವೈ ನಾರಾಯಣಃ' ಎಂಬ ಶ್ರುತಿಗಳಲ್ಲಿ, 'ಪುರುಷಃ ಪರ ಆತ್ಮಾಜೋ ಬ್ರಹ್ಮ ನಾರಾಯಣಃ ಪ್ರಭುಃ' ಎಂಬ ಸ್ಮೃತಿಯಲ್ಲಿಯೂ, ಪುರುಷ ಶಬ್ದ ಪ್ರಯೋಗವು ವಿಷ್ಣುವಿನಲ್ಲೇ ಕಂಡಿದೆ.

'ಪುರುಷವಿಧಮಪಿ ಚೈನಮಧೀಯತೇ' ಎಂಬ ಸೂತ್ರದಲ್ಲಿ ವ್ಯಾಸರೂ ಕೂಡ ಪುರುಷಸೂಕ್ತ ಸಮಾಖ್ಯೆಯಿಂದ ವೈಶ್ವಾನರವಿದ್ಯೆಗೆ ವಿಷ್ಣುಪರತ್ವವನ್ನು ಹೇಳಿದ್ದಾರೆ. ಆದ್ದರಿಂದಲೂ ವಿಷ್ಣುವೇ ಪುರುಷ ಶಬ್ದ ವಾಚ್ಯ.

ಸಹಸ್ರಶೀರ್ಷಾ – 'ಪರಮೋ ಹರಿಃ' ಎಂಬ ಶ್ರುತಿಯಲ್ಲಿ 'ಅನಂತ ಶೀರ್ಷಃ ಅನಂತಾಕ್ಷಃ ಅನಂತಬಾಹುಃ' ಎಂದಿರುವುದರಿಂದ ಇಲ್ಲಿ ಸಹಸ್ರಶಬ್ದಕ್ಕೆ ಅನಂತ ಎಂದು ಅರ್ಥಮಾಡಬೇಕು. ಮತ್ತು ಆ ಶ್ರುತಿಗೆ ಅನುಸಾರವಾಗಿ ಇಲ್ಲಿರುವ ಸಹಸ್ರಶೀರ್ಷ ಎಂಬುದನ್ನು ಉಪಲಕ್ಷಣವಾಗಿಟ್ಟುಕೊಂಡು ಅನಂತಬಾಹು ಇತ್ಯಾದಿ ಮಹಿಮೆಯನ್ನು ತಿಳಿಯಬೇಕು.

Rarest Archiver

'ಅಶರೀರಃ ಪ್ರಜ್ಞಾತ್ಮಾ' ಇತ್ಯಾದಿ ಶ್ರುತಿಗಳಲ್ಲಿ ಭಗವಂತನಿಗೆ ಶರೀರವಿಲ್ಲ ಎಂದು ಹೇಳಿದ್ದರೂ' ವಿಕರಣತ್ವಾನ್ನೇತಿ ಚೇತ್ ತದುಕ್ತಮ್' ಎಂಬ ಬ್ರಹ್ಮ ಸೂತ್ರಾನುಸಾರವಾಗಿ ಅಪ್ರಾಕೃತ ದೇಹರಹಿತ ಎಂದು ಆ ಶ್ರುತಿಯ ಭಾವವನ್ನು ತಿಳಿಯಬೇಕು. ಆದ್ದರಿಂದಲೇ 'ಸ ಭೂಮಿಂ ಅತ್ಯತಿಷ್ಠತ್' ಎಂಬುದಾಗಿ ಪ್ರಕೃತಿಗಿಂತ ಉತ್ತಮತ್ವ ಹೇಳಲಾಗಿದೆ.

ಭೂಮಿಂ –'ಯತ್ಕಿಂಚ ಜಗತ್ಯಾಂ ಜಗತ್' ಎಂಬ ಈಶಾವಾಸ್ಯ ಮಂತ್ರದಲ್ಲಿ ಜಗತೀ ಶಬ್ದದಂತೆ ಇಲ್ಲಿಯೂ ಭೂಮಿ ಶಬ್ದವು ಪ್ರಕೃತಿಪರ ಎಂದು ಭಾವಿಸಬೇಕು. ಪ್ರಕೃತಿ ಶಬ್ದದ ಬದಲಿಗೆ ಭೂಮಿ ಶಬ್ದವನ್ನು ಪ್ರಯೋಗಿಸಿದ್ದರಿಂದ ಪೃಥಿವಿಯೇ ಮೊದಲಾದ ಪಂಚಭೂತ ನಿರ್ಮಿತ ದೇಹರಹಿತ ಎಂಬ ಅರ್ಥ ವಿಶೇಷವೂ ತಿಳಿಯುತ್ತದೆ.

ದಶಾಂಗುಲಮ್ – 'ದಶೇತಿ ಸರ್ವಮ್' ಎಂಬ ಐತರೇಯ ಉಪನಿಷತ್ತಿನಲ್ಲಿ ಎಲ್ಲಾ ಸಂಖ್ಯೆಗಳಿಗೂ ಹತ್ತರಲ್ಲೇ ಅಂತರ್ಭಾವವನ್ನು ಹೇಳಿದ್ದರಿಂದ ದಶಾಂಗುಲಂ ಎಂಬಲ್ಲಿ ದಶ ಶಬ್ದಕ್ಕೆ ಸರ್ವ ಎಂದು ಅರ್ಥ ಮಾಡಬೇಕು. ಆದ್ದರಿಂದ ದಶಾಂಗುಲಮತ್ಯತಿಷ್ಠತ್ ಎಂಬುದಕ್ಕೆ ದೇಶಕಾಲ ಪರಿಮಿತಿ ಇಲ್ಲದೇ ಲಕ್ಷ್ಮೀದೇವಿಯನ್ನೂ ಮೀರಿದ್ದಾನೆ ಎಂದು ಅರ್ಥ-ವಾಗುತ್ತದೆ. ಪ್ರಕೃತ್ಯಾದಿಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವುದೇ ಅದಕ್ಕೆ ಕಾರಣ.

ವಿಶ್ವತೋ ವೃತ್ವಾ – ಪುರುಷ ಪದದಿಂದ ಭಗವಂತನು ದೇಹ ಮತ್ತು ಹೃದಯಸ್ಥ ಎಂದು ತಿಳಿಯುವ ಪ್ರಯುಕ್ತ, ಅಲ್ಪದೇಶಸ್ಥತ್ವ ಮಾತ್ರ ಭಗವಂತನಿಗಿದೆ ಎಂಬ ಶಂಕಾ ಬಂದೀತು. ಅದು 'ವಿಶ್ವತೋ ವೃತ್ವಾ' ಎಂದು ವ್ಯಾಪ್ತತ್ವವನ್ನು ಹೇಳಿದ್ದರಿಂದ ನಿವೃತ್ತವಾಗುತ್ತದೆ.

'ಭೂಮಿಂ ವಿಶ್ವತಃ ವೃತ್ವಾ ದಶಾಂಗುಲಮತ್ಯತಿಷ್ಠತ್' ಎಂಬುದಾಗಿಯೂ ಅನ್ವಯಮಾಡಬಹುದು. ಇಲ್ಲಿ ವೃತ್ವಾ ಎಂದರೆ ವ್ಯಾಪ್ಯ ಎಂದು ಅರ್ಥ. ಜಗತ್ತಿನಲ್ಲೂ ವ್ಯಾಪಿಸಿ ದಶಾಂಗುಲ ಪರಿಮಿತವಾದ ಪ್ರಾಣಿಗಳ ಹೃದಯದಲ್ಲಿಯೂ ಇದ್ದಾನೆ ಎಂದು ಅರ್ಥವಾಗುತ್ತದೆ. ॥ 1 ॥

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ 2 ॥

ಹಿಂದೆ ಇದ್ದದ್ದು ಈಗಿರುವುದು ಮುಂದೆ ಬರುವಂತಹದು ಎಲ್ಲವೂ ಪುರುಷ ನಾಮಕ ನಾರಾಯಣನಿಂದಲೇ ವ್ಯಾಪ್ತವಾಗಿದೆ. ಸಂಸಾರಿ ವರ್ಗಕ್ಕೂ ಮುಕ್ತವರ್ಗಕ್ಕೂ ಅವನೇ ನಿಯಾಮಕನು.

ಏವಂ ಪೂರ್ವಮಂತ್ರೇ ಸರ್ವಕಾರಣಪ್ರಕೃತಿನಿಯಂತೃತ್ವತದತೀತತ್ವಾಖ್ಯಮಹಿಮಾ ಉಕ್ತಃ । ದ್ವಿತೀಯಮಂತ್ರೇಣ ಪ್ರಾಕೃತಸರ್ವನಿಯಂತೃತ್ವಾದಿಮಹಾತ್ಮ್ಯಮಾಹ ಪುರುಷ ಏವೇದಮಿತಿ । ಇದಂ ಪ್ರಮಾಣಪ್ರಮಿತಮ್ । ಭೂತಂ ಅತೀತಂ, ಯಚ್ಚ ಭವ್ಯಂ ಆಗಾಮಿ ಭವದಿತ್ಯುಪಲಕ್ಷಣಂ ವರ್ತಮಾನ-ಮಿತ್ಯರ್ಥಃ । 'ಯತ್' ಇತ್ಯುಕ್ತೇಸ್ತದಿತಿ ಲಭ್ಯತೇ । ತದೇತತ್ಸರ್ವಂ ಪುರುಷ ಏವ । ರಾಜಾ ರಾಷ್ಟ್ರಂ ಇತಿವತ್ ಪುರುಷಾಧೀನಮೇವ । 'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ' ಇತಿ ಸ್ಮೃತೇಃ । 'ಇದಂ ಹಿ ವಿಶ್ವಂ ಭಗವಾನಿವೇತರೋ ಯತೋ ಜಗತ್ಸ್ಥಾನನಿರೋಧಸಂಭವಃ' ಇತಿ ಬಾಗವತೇ ಜಗದುತ್ಪತ್ಯಾದಿಹೇತುತ್ವಾತ್ ಜಗದಾತ್ಮಕತ್ವೇನೋಚ್ಯತೇ ಭಗವಾನಿತಿ ವ್ಯಾಖ್ಯಾನಾಚ್ಚ । 'ಪುರುಷ

Rarest Archiver

ಏವೇದಂ ಸರ್ವಮ್' ಇತಿ 'ಪುರುಷೇಣೈವ' ಇದಂ ಸರ್ವಂ ವ್ಯಾಪ್ತಂ ಆತೃಣಾದಕಾರಿ ಈಷತ್ತತ್ಸರ್ವಂ ಭಗವಾನಿತಿ ಮಿಥ್ಯಾದೃಷ್ಟಿರೇಷಾ' ಇತಿ ಶಾಖಾಂತರಬ್ರಾಹ್ಮಣೇನಾಸ್ಯ ವಾಕ್ಯಸ್ಯ ಪ್ರತೀಕಪೂರ್ವಂ ಸರ್ವ-ವ್ಯಾಪಿತ್ವಾರ್ಥಕತ್ವೇನ ವ್ಯಾಖ್ಯಾನಾಚ್ಚ । ವ್ಯಾಪಿತ್ವಸ್ಯ ತನ್ನಿಯಮನಾರ್ಥತ್ವೇನ ಸರ್ವಸ್ಯ ತದಧೀನತ್ವ-ಲಾಭಾತ್ । ಅತ ಏವ ಸುಧಾಯಾಮುಪಾಸನಾಪಾದೇ 'ವ್ಯಾಪ್ತಮ್' ವಶೀಕೃತಂ ಇತಿ ವ್ಯಾಖ್ಯಾತಮ್, 'ಪುರುಷ ಏವೇದಂ ಸರ್ವಂ ಭೂತಂ ಭವ್ಯಂ ಭವಚ್ಚ ಯತ್ । ಉಚ್ಯತೇ ತದಧೀನತ್ವಾನ್ನ ತು ಸರ್ವ-ಸ್ವರೂಪತಃ' ಇತಿ ಪ್ರಥಮೇ ಬೃಹದ್ಭಾಷ್ಯೋಕ್ತಭಾರತವಚನಾಚ್ಚ।

ಯದ್ವಾ ಸುಧೋಕ್ತರೀತ್ಯಾ 'ಪತ್ಯಾದಿಶಬ್ದೇಭ್ಯಃ' ಇತ್ಯತ್ರ ಟೀಕೋಕ್ತರೀತ್ಯಾ ಚ ಭೂತಭವ್ಯಾದಿಕಂ ಸಂಸಾರಿಪ್ರಾಣಿಜಾತಮ್ । ತೇಷಾಂ ದೇಹದ್ವಾರಾ ಭೂತತ್ವಾದ್ಯುಪಪತ್ತೇಃ 'ಪುರುಷ ಏವ' ಪುರುಷಾ-ಧೀನಮೇವ, ಯತ್ ಯಸ್ಮಾತ್ ಅನ್ನೇನ ದ್ವಿತೀಯಾರ್ಥೇ ತೃತೀಯಾ, ಅನ್ನಂ ಅದನೀಯಂ ಮರಣಶೀಲಂ ಸಂಸಾರಿಜೀವಜಾತಂ 'ಅತಿರೋಹತಿ' ಅತಿಕ್ರಾಮತಿ । ಅಮುಕ್ತಾಧಿಪತಿರಿತಿ ಯಾವತ್ । ತಸ್ಮಾತ್ 'ಅಮೃತತ್ವಸ್ಯ' ಭಾವಭವಿತ್ರೋರಭಾವಾತ್ ಮುಕ್ತವರ್ಗಸ್ಯಾಪಿ ಈಶಾನಃ । ಉತಶಬ್ದೋಽಪ್ಯರ್ಥಪರಃ । ಸಂಸಾರೇ ಸ್ವಾಧೀನಂ ಜಗತ್ ಯದಿ ಮುಕ್ತೌ ಸ್ವಾಧೀನತಾಂ ಜಹ್ಯಾತ್ ತದಾ ಪ್ರೇಕ್ಷಾವಾನ್ ತನ್ನ ಮೋಚಯೇತ್ ಅತೋ ಮುಕ್ತಾವಪಿ ತದಧೀನಮೇವೇತಿ । 'ಪುರುಷ ಏವೇದಮ್' ಇತಿ ಪೂರ್ವಾ-ರ್ಧೋಕ್ತಮುಕ್ತೇಶತ್ವಂ ಯದನ್ನೇನೇತ್ಯನೇನ ಹೇತುತಯಾ ಅನೂದ್ಯ ಉತೇತಿ ವಾಕ್ಯೇ ಮುಕ್ತವರ್ಗೇ-ಶಾನತ್ವಂ ವಿಧೀಯತೇ ಇತ್ಯೇವಾರ್ಥೋ ನ ಸರ್ವಾತ್ಮತ್ವಮ್ । ಯೇನ ಪಶುಪುರುಷೋಽತ್ರೋಚ್ಯತೇ । ಮುಕ್ತಾಮುಕ್ತಸ್ವಾಮಿತ್ವಸ್ಯ ಚ 'ಮುಕ್ತಾನಾಂ ಪರಮಾ ಗತಿಃ', 'ಅಮೃತಸ್ಯೈಷ ಸೇತುಃ', 'ಮುಕ್ತೋಪಸೃಪ್ಯ-ವ್ಯಪದೇಶಾತ್' ಇತಿ ಶ್ರುತಿಸೂತ್ರಾದಿಭಿಃ ವಿಷ್ಣ್ವೇಕನಿಷ್ಠತ್ವೇನ ತಲ್ಲಿಂಗಾತ್ 'ಸೋಽಮೃತಸ್ಯಾಭಯ-ಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್' ಇತಿ ದ್ವಿತೀಯಸ್ಕಂಧೇ ಷಷ್ಠಾಧ್ಯಾಯೇ ಅನ್ನೇನೇತ್ಯತದನ್ನಮಿತಿ ಹೇತುತಯಾ ಅನೂದ್ಯ ಸೋಽಮೃತಸ್ಯೇಶಾನಃ ಇತಿ ಮುಕ್ತೇಶತ್ವೋಕ್ತೇಶ್ಚೇತಿ ॥ 2 ॥

ವಿಶೇಷ ವಿಚಾರ - ಹಿಂದಿನ ಮಂತ್ರದಲ್ಲಿ ಪುರುಷನಾಮಕ ನಾರಾಯಣನ ಪ್ರಕೃತಿಯಾಮಕತ್ವ ಮತ್ತು ಪ್ರಕೃತ್ಯ-ತೀತತ್ವಗಳನ್ನು ಹೇಳಲಾಗಿದೆ. ಈ ಮಂತ್ರದಲ್ಲಿ ಪ್ರಾಕೃತಸರ್ವನಿಯಾಮಕತ್ವಾದಿ ಮಹಿಮೆಯನ್ನು ಬಣ್ಣಿಸಲಾಗುವುದು.

ಪುರುಷ ಏವೇದಂ ಸರ್ವಂ - ಎನ್ನುವುದಕ್ಕೆ ಇವೆಲ್ಲವೂ ಪುರುಷಾಧೀನ ಎಂದರ್ಥ ಹೊರತು ಇದೆಲ್ಲವೂ ಪುರುಷನೇ ಎಂದು ಐಕ್ಯವನ್ನು ಭಾವಿಸಬಾರದು. 'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ' (ಯಾರ ಅಸ್ತಿತ್ವವು ಯಾರ ಅಧಿ ೀನವೋ ಅವರಿಬ್ಬರಿಗೂ ಐಕ್ಯ ವ್ಯಪದೇಶ ಮಾಡಲಾಗುವುದು) ಎಂಬ ಸ್ಮೃತಿಯೇ ಇದಕ್ಕೇ ಆಧಾರ. ರಾಷ್ಟ್ರವು ರಾಜಾಧೀನ ಎಂಬ ಅರ್ಥದಲ್ಲಿ ರಾಜಾ ರಾಷ್ಟ್ರಂ ಎಂಬ ಪ್ರಯೋಗ ಕಂಡಿದೆ.

'ಇದಂ ಹಿ ವಿಶ್ವಂ ಭಗವಾನಿವೇತರೋ ಯತೋ ಜಗತ್ ಸ್ಥಾನ ನಿರೋಧ ಸಂಭವಃ' ಎಂಬ ಭಾಗವತ ಶ್ಲೋಕಕ್ಕೆ 'ಜಗತ್ತಿನ ಸೃಷ್ಟ್ಯಾದಿಗಳಿಗೆ ಭಗವಂತನು ಕಾರಣನಾದ್ದರಿಂದ ವಿಶ್ವವೇ ಭಗವಂತ ಎಂದು ವ್ಯವಹರಿಸಲಾಗಿದೆ' ಎಂಬು-ದಾಗಿಯೇ ವ್ಯಾಖ್ಯಾನ ಮಾಡಿದ್ದಾರೆ.

Rarest Archiver

'ಪುರುಷ ಏವೇದಂ ಸರ್ವಮಿತಿ ಪುರುಷೇಣೈವೇದಂ ಸರ್ವಂ ವ್ಯಾಪ್ತಮ್' ಎಂಬ ಶಾಖಾಂತರದ ಬ್ರಾಹ್ಮಣ ವಾಕ್ಯದಲ್ಲಿ ಪುರುಷಸೂಕ್ತದ ಈ ವಾಕ್ಯವನ್ನೇ ಉಲ್ಲೇಖಿಸಿ ಅದಕ್ಕೆ 'ಇದೆಲ್ಲವೂ ಪುರುಷನಿಂದಲೇ ವ್ಯಾಪ್ತ' ಎಂದು ಅರ್ಥೈಸಲಾಗಿದೆ. ಭಗವಂತನು ಸರ್ವತ್ರ ವ್ಯಾಪ್ತನಾದದ್ದು ಸರ್ವವನ್ನು ನಿಯಮಿಸುವುದಕ್ಕೋಸ್ಕರವೇ. ಆದುದರಿಂದ ಇದೆಲ್ಲವೂ ಭಗವದಧೀನ ಎಂದು ಅರ್ಥವಾಗುತ್ತದೆ. ಆದ್ದರಿಂದಲೇ ಸುಧಾ – ಉಪಾಸನಾ ಪಾದದಲ್ಲಿ ಪುರುಷೇಣ ವ್ಯಾಪ್ತಂ ಎಂಬುದಕ್ಕೆ ವಶೀಕೃತಂ ಎಂದು ವ್ಯಾಖ್ಯಾನ ಮಾಡಿದ್ದಾರೆ.

ಪುರುಷ ಏವೇದಂ ಸರ್ವಂ ಭೂತಂ ಭವ್ಯಂ ಭವಚ್ಚ ಯತ್ ।
ಉಚ್ಯತೇ ತದಧೀನತ್ವಾತ್ ನ ತು ಸರ್ವಸ್ವರೂಪತಃ ॥

(ಭೂತಭವಿಷ್ಯದ್ವರ್ತಮಾನವಾದ ಈ ಜಗತ್ತು ಪುರುಷನ ಅಧೀನವಾದದ್ದರಿಂದ 'ಪುರುಷ ಏವ' ಎಂದು ಹೇಳಲ್ಪಟ್ಟಿದೆ, ಹೊರತು ಪುರುಷ ಸ್ವರೂಪವಾದ್ದರಿಂದ ಅಲ್ಲ) ಎಂಬುದಾಗಿ ಬೃಹದ್ಭಾಷ್ಯೋದಾಹೃತವಾದ ಭಾರತವಚನದಿಂದಲೂ ಜಗತ್ತಿಗೆ ಪುರುಷಾಧೀನತ್ವವನ್ನೇ ತಿಳಿಯಬೇಕು.

ಯದ್ಭೂತಂ ಯಚ್ಚ ಭವ್ಯಮ್ – ಸುಧಾದಲ್ಲಿ ಹೇಳಿದಂತೆ ಮತ್ತು 'ಪತ್ಯಾದಿ ಶಬ್ದೇಭ್ಯಃ' ಎಂಬ ಸೂತ್ರಭಾಷ್ಯದ ಟೀಕಾದಲ್ಲಿ ಹೇಳಿದಂತೆ 'ಭೂತಭವ್ಯಭವತ್' ಎಂಬುದರಿಂದ ಸಂಸಾರಿ ಚೇತನರನ್ನು ಇಟ್ಟುಕೊಳ್ಳಬೇಕು. ಅವರಿಗೂ ದೇಹದ್ವಾರಾ ಭೂತತ್ವಾದಿಗಳು ಕೂಡುತ್ತವೆ.

ಯದನ್ನೇನ – ಎಂಬಲ್ಲಿ ಅನ್ನ ಅಂದರೆ ಸಂಸಾರಿಜೀವರು. ತೃತೀಯಾ ವಿಭಕ್ತಿಯನ್ನು ದ್ವಿತೀಯಾರ್ಥದಲ್ಲಿ ಇಟ್ಟುಕೊಳ್ಳಬೇಕು. ಅಮೃತತ್ವಸ್ಯ ಎಂಬುದನ್ನು 'ಭಾವ ಭವಿತ್ರೋರಭೇದಃ' ಎಂಬ ನ್ಯಾಯದಿಂದ ಭವಿತೃ (ಧರ್ಮಿ) ವಾಚಕ ಎಂದು ಇಟ್ಟುಕೊಳ್ಳಬೇಕು.

ಉತಾಮೃತತ್ವಸ್ಯ – ಉತ ಎಂದರೆ 'ಅಪಿ' ಎಂದರ್ಥ. ಭಗವಂತನು ಸಂಸಾರಿ ಜೀವರಿಗೆ ನಿಯಾಮಕನಾದುದರಿಂದ ಮುಕ್ತರಿಗೂ ನಿಯಾಮಕ ಎಂದು ಅರ್ಥವಾಗುತ್ತದೆ. ಸಂಸಾರದಲ್ಲಿ ತನ್ನ ಅಧೀನರಾದವರನ್ನು ಮುಕ್ತಿಯಲ್ಲಿ ಸ್ವತಂತ್ರರನ್ನಾಗಿ ಮಾಡಿದರೆ ಅವನು ಪ್ರೇಕ್ಷಾವಂತನಾಗಲಾರ. ಆದ್ದರಿಂದ ಮುಕ್ತಿಯಲ್ಲೂ ನಿಯಾಮಕನಾಗಿ ಇರುತ್ತಾನೆಂದು ಅಭಿಪ್ರಾಯ. ಪೂರ್ವಾರ್ಧದಲ್ಲಿ ಹೇಳಲ್ಪಟ್ಟ ಅಮುಕ್ತ ನಿಯಾಮಕತ್ವವನ್ನು 'ಯದನ್ನೇನಾತಿರೋಹತಿ' ಎಂಬುದರಿಂದ ಹೇತುವನ್ನಾಗಿಟ್ಟುಕೊಂಡು ಅದರಿಂದ 'ಉತಾಮೃತತ್ವಸ್ಯೇಶಾನಃ' ಎಂಬಲ್ಲಿ ಮುಕ್ತನಿಯಾಮಕತ್ವವನ್ನು ಸಾಧಿಸಲಾಗಿದೆ. 'ಮುಕ್ತಾಮುಕ್ತನಿಯಾಮಕತ್ವವು ವಿಷ್ಣುವಿನಲ್ಲೇ ಇರುವ ಧರ್ಮ' ಎಂಬುದಕ್ಕೆ 'ಮುಕ್ತಾನಾಂ ಪರಮಾ ಗತಿಃ' 'ಅಮೃತಸ್ಯ ಏಷ ಸೇತುಃ' 'ಮುಕ್ತೋಪಸೃಪ್ಯವ್ಯಪದೇಶಾತ್' ಇತ್ಯಾದಿ ಪ್ರಮಾಣವಚನಗಳು ಆಧಾರವಾಗಿದೆ. ಉತ್ತರಾರ್ಧ ಹೇಳಿದ ಅರ್ಥದಲ್ಲಿ 'ಸೋಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್' (ಸಂಸಾರಿಗಳನ್ನು ಮೀರಿದ್ದರಿಂದ ಮುಕ್ತರಿಗೂ ನಿಯಾಮಕ) ಎಂಬ ಭಾಗವತ ದ್ವಿತೀಯ ಸ್ಕಂಧದ ಆರನೇ ಅಧ್ಯಾಯ ಶ್ಲೋಕವು ಆಧಾರವಾಗಿದೆ. ॥ 2 ॥

ಏತಾವಾನಸ್ಯ ಮಹಿಮಾऽತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ 3 ॥

ತೃತೀಯಾ – ಏತಾವಾನಸ್ಯ ಮಹಿಮೇತಿ । ಅಸ್ಯಾಂ ಋಚಿ ಪ್ರಾಗುಕ್ತಮುಕ್ತವರ್ಗೇಶಾನತ್ವಂ ಕಥಮಿತ್ಯತೋ ಮುಕ್ತಪ್ರಾಪ್ಯಲೋಕೇಶತ್ವಮಹಿಮೋಚ್ಯತೇ । 'ಅಸ್ಯ' ಪುರುಷಸ್ಯ ಸಹಸ್ರಶೀರ್ಷತ್ವವಿಶ್ವವ್ಯಾಪ್ತತ್ವ-

Rarest Archiver

ಮುಕ್ತಾಮುಕ್ತಸರ್ವನಿಯಂತೃತ್ವಾದಿರೂಪಪ್ರಾಗುಕ್ತೋ ಮಹಿಮಾ 'ಏತಾವಾನ್' ಇತಿ ಕಾಕುಸ್ವರಃ । ಏತಾವಾನೇವ ನೇತ್ಯರ್ಥಃ । ಕಿಂ ತ್ವಿತ್ಯತಃ ಆಹ- ಅತೋ ಜ್ಯಾಯಾನ್ ಇತಿ । 'ಅತಃ' ಪ್ರಾಗುಕ್ತಮಹಿಮ್ನೋಽಪಿ ಜ್ಯಾಯನ್ ಜ್ಞಾನಾನಂದಬಲೈಶ್ವರ್ಯಪ್ರಾಕೃತಲೋಕೇಶತ್ವಾದಿಭಿಃ ಜ್ಯಾಯಾನ್ ಶ್ರೇಷ್ಠಃ । ಕಥಮಿತ್ಯತೋ ವ್ಯನಕ್ತಿ- ಪಾದ ಇತಿ । ಅಸ್ಯ ಪ್ರಕೃತಪುರುಷನಾಮ್ನೋ ಹರೇಃ ವಿಶ್ವಾ ವಿಶ್ವಾನಿ 'ಸುಪಾಂ ಸುಲುಕ್ ಪೂರ್ವಸವರ್ಣ' ಇತ್ಯಾದಿಸೂತ್ರೇಣ ಪ್ರಥಮಾವಿಭಕ್ತೇಃ ಆಕಾರಾದೇಶಃ । ಭೂತಾನಿ ಚೇತನಾಚೇತನವಸ್ತೂನಿ ಜೀವರಾಶಿರೇವ ವಾ, ಏಕಃ ಪಾದಃ ಏಕಃ ಅಂಶಃ । ತದೀಯ ಜ್ಞಾನಾನಂದಬಲೈಶ್ವರ್ಯಾದಿಮಾಹಾತ್ಮ್ಯಸ್ಯ ಚತುರ್ಧಾ ವಿಭಾಗೇ ಕೃತೇ ಚತುರ್ಥೋ ಭಾಗೋ ಯಾವಾನ್, ತಾವತ್-ಜ್ಞಾನಾನಂದಬಲಾದ್ಯುಪೇತಾನಿ ಸರ್ವವಸ್ತೂನೀತ್ಯರ್ಥಃ । ಏತಚ್ಚತುರ್ಗುಣಪರಿಮಿತಜ್ಞಾನಾನಂದಾದಿಮಾನ್ ಹರಿರಿತಿ ಯಾವತ್ । ಏತಚ್ಚ 'ಬುದ್ಧ್ಯರ್ಥಃ ಪಾದವತ್' ಇತಿ ಸೂತ್ರೋಕ್ತದಿಶಾ ಪರಿಮಿತ-ಜ್ಞಾನಾನಂದಾದಿಮತೋ ಹರೇರ್ಮಹಿಮ್ನೋ ಬುಧ್ಯಾರೋಹಾರ್ಥಮೇವೋಕ್ತಂ ಧ್ಯೇಯಮ್ । 'ಪಾದ ಷಡ್ಢೋತುರ್ನ ಕಿಲಾವಿವಿತ್ಸೇ' ಇತಿ ಶ್ರುತೇಃ । 'ಜ್ಞಾಪನಾರ್ಥಾಯ ಲೋಕಸ್ಯ ಯಥಾ ರಾಜೀವ ದೇವರಾಟ್' ಇತಿ ಸ್ಮೃತೇಶ್ಚ । ಅಸ್ಯ ಪುರುಷಸ್ಯ 'ತ್ರಿಪಾತ್' ಶೇಶ್ಛಂದಸಿ ಇತಿ ಶಿಲೋಪೇ ಬಹುವಚನಸ್ಯ ಏಕವಚನಂ ಛಾಂದಸಮ್ । ಅಮೃತಂ ದೇಹತೋಽಪಿ ನಾಶಹೀನಂ ಅಸ್ಯ ಪಾದತ್ರಯಂ ನಾರಾಯಣ-ವಾಸುದೇವವೈಕುಂಠಾಖ್ಯರೂಪತ್ರಯಂ 'ತ್ರಿದಿವಿ' ಚಿತ್ರಕೃತ್ಯಾತ್ಮಕತ್ವೇನ ದ್ಯೋತಮಾನೇ, ಏಕವಚನಂ ಬಹುವಚನಾರ್ಥೇ । ಲೋಕತ್ರಯವಿವಿಕ್ಷಾಯಾಂ ಲಕ್ಷಯೋಜನೋಚ್ಛ್ರಿತಾದಂತರಿಕ್ಷಾದುಪರಿತನ-ಲೋಕಾನಾಂ ದ್ಯುಶಬ್ದಾರ್ಥತ್ವೇನ ಅಂತರಿಕ್ಷಾದುಪರಿತನತ್ವೇನ ದ್ಯುಶಬ್ದವಾಚ್ಯೇಷು ಕ್ರಮಾತ್ ಶ್ವೇತದ್ವೀಪ-ಅನಂತಾಸನ-ವೈಕುಂಠಾಖ್ಯಲೋಕೇಷು ತಿಷ್ಠತೀತ್ಯರ್ಥಃ । 'ಭಿನ್ನಪಾದಾಃ ಸರ್ವಜೀವಾಃ ತಸ್ಯ ಸಾದೃಶ್ಯ-ಮಾತ್ರತಃ । ಸ್ವರೂಪಪಾದಾ ವಿಷ್ಣೋಸ್ತು ತ್ರಯೋಽಪಿ ದಿವಿ ಸಂಸ್ಥಿತಾಃ । ನಾರಾಯಣೋ ವಾಸುದೇವಃ ವೈಕುಂಠ ಇತಿ ತೇ ತ್ರಯಃ' ಇತಿ ಛಾಂದೋಗ್ಯಭಾಷ್ಯೋಕ್ತೇಃ ಅತ್ರ ತ್ರಿಪಾಚ್ಛಬ್ದಾರ್ಥಃ ಭಗವಾನ್ । 'ಸುದರ್ಶನಾಸ್ತ್ರಂ ಭಗವಾನ್ ಪ್ರಾಯುಂಕ್ತ ದಯಿತಂ ತ್ರಿಪಾತ್' ಇತಿ ತೃತೀಯಸ್ಕಂಧೋಕ್ತ್ಯಾ ತ್ರಿಪಾಚ್ಛಬ್ದಸ್ಯ ವಿಷ್ಣ್ವೇಕನಿಷ್ಠತ್ವಾನ್ನಾನ್ಯಸ್ಯ ಪ್ರತಿಪಾದ್ಯತೇತಿ ಜ್ಞೇಯಮ್ ॥ 3 ॥

ಹಿಂದೆ ಹೇಳಲ್ಪಟ್ಟ ಸಹಸ್ರಶೀರ್ಷತ್ವಾದಿಗಳಿಂದ ಮಾತ್ರ ಪರಮಾತ್ಮನು ಶ್ರೇಷ್ಠನಲ್ಲ. ಅದಕ್ಕಿಂತ ಬೇರೆಯಾದ ಪ್ರಾಕೃತಲೋಕೇಶತ್ವಾದಿಮಹಿಮೆಗಳಿಂದಲೂ ಶ್ರೇಷ್ಠನಾಗಿದ್ದಾನೆಂದು ತಿಳಿಯಬೇಕು. ಪರಮಾತ್ಮನ ಜ್ಞಾನಾನಂದಾದಿ ಗುಣ-ಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿದ್ದಾದರೆ ಅದರ ಒಂದು ಭಾಗದಷ್ಟನ್ನು ಮಾತ್ರ ಈ ಜೀವರಾಶಿಯು ಹೊಂದಿದೆ. ಪರಮಾತ್ಮನ ನಾರಾಯಣ, ವಾಸುದೇವ, ವೈಕುಂಠವೆಂಬ ಮೂರು ರೂಪಗಳು ಶ್ವೇತದ್ವೀಪ, ಅನಂತಾಸನ ವೈಕುಂಠ ಲೋಕಗಳಲ್ಲಿ ಇರುತ್ತವೆ.

ಏತಾವಾನ್ - ಭಗವಂತನ ಮಹಿಮೆಯು ಸಹಸ್ರಶೀರ್ಷತ್ವ ಮುಕ್ತಾಮುಕ್ತ ನಿಯಾಮಕತ್ವ ಇಷ್ಟೇಯೋ ಎಂಬುದಾಗಿ ಕಾಕುಸ್ವರದಲ್ಲಿ ಏತಾವಾನ್ ಎಂಬ ಪ್ರಯೋಗವಿದೆ. ಅಂದರೆ ಪೂರ್ವೋಕ್ತ ಮಹಿಮೆ ಮಾತ್ರವಲ್ಲ ಇನ್ನೂ ಇದೆ ಎಂದು ಗ್ರಹಿಸಬೇಕು.

Rarest Archiver

ವಿಶ್ವಾಭೂತಾನಿ - ಎಂಬಲ್ಲಿ 'ಸುಪಾಂ ಸುಲುಕ್' ಇತ್ಯಾದಿ ಸೂತ್ರದಿಂದ ಪ್ರಥಮಾವಿಭಕ್ತಿಗೆ ಅಕಾರಾದೇಶ ಬಂದು ವಿಶ್ವಾ ಎಂದಾಗಿದೆ. ಆದ್ದರಿಂದ ವಿಶ್ವಾಶಬ್ದಕ್ಕೆ ವಿಶ್ವಾನಿ ಎಂದು ಅರ್ಥ.

ಪಾದೋಽಸ್ಯ - ಸಹಸ್ರಶೀರ್ಷತ್ವಾದಿಗಳಿಲ್ಲದೆ ಬೇರೆ ಮಹಿಮೆ ಯಾವುದೆಂಬುದನ್ನು ಇಲ್ಲಿ ಹೇಳಿದ್ದಾರೆ. ಭಗವಂತನ ಜ್ಞಾನಾನಂದಾದಿ ಗುಣಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿದಾಗ ಒಂದು ಭಾಗದಷ್ಟನ್ನು ಮಾತ್ರ ಸಮಸ್ತ ಜೀವರಾಶಿಯು ಹೊಂದಿದೆ. ಅಂದರೆ ಸಮಸ್ತ ಜೀವಿಗಳಿಗಿಂತಲೂ ಭಗವನ್ಮಹಿಮೆ ನಾಲ್ಕು ಪಟ್ಟು ಅಧಿಕ ಎಂದು ಹೇಳಿದಂತೆ ಆಗುತ್ತದೆ. ಯದ್ಯಪಿ ಭಗವಂತನ ಜ್ಞಾನಾದಿಗಳು ಅಪರಿಮಿತ ಮತ್ತು ಅಲೌಕಿಕ. ಆದರೂ ಇದನ್ನು 'ಬುಧ್ಯರ್ಥಃ ಪಾದವತ್' ಎಂಬಲ್ಲಿ ಹೇಳಿದಂತೆ ಪಾಮರರ ಬುದ್ಧ್ಯಾರೋಹಕ್ಕಾಗಿ ಈ ರೀತಿಯಾಗಿ ಹೇಳಿದ್ದು ಎಂದು ತಿಳಿಯಬೇಕು. ಇಂದ್ರನ ವೈಭವವನ್ನು ತಿಳಿಸುವುದಕ್ಕಾಗಿ 'ರಾಜೇವ ದೇವರಾಟ್' ಎಂದು ನಾವು ಕಂಡಿರುವ ರಾಜನ ವೈಭವಕ್ಕಿಂತಲೂ ಅಧಿಕ ವೈಭವವನ್ನು ಊಹಿಸಿಕೊಳ್ಳಲು ಹೇಳುವಂತೆಯೇ ನಾಲ್ಕು ಪಟ್ಟು ಅಧಿಕ ಎಂಬುದನ್ನು ಬುದ್ಧ್ಯಾರೋಹಕ್ಕಾಗಿ ಹೇಳಿದ್ದೇ ಹೊರತು ಅಷ್ಟೇ ಎಂದು ಗ್ರಹಿಸಬಾರದು. ಅದರಂತೆ ಪಾಮರರ ತಿಳುವಳಿಕೆಗಾಗಿ ಭಗವಂತನ ಜ್ಞಾನಾನಂದಾದಿಗಳಲ್ಲಿ ನಮ್ಮ ಜ್ಞಾನಾ-ನಂದಾದಿಗಳಲ್ಲಿ ಪ್ರಯೋಗಿಸುವ ಜ್ಞಾನಾನಂದಾದಿ ಶಬ್ದಗಳನ್ನು ಪ್ರಯೋಗಿಸಿದ್ದಾರೆ ಹೊರತು, ನಮ್ಮಲ್ಲಿರುವ ಜ್ಞಾನಾ-ನಂದಾದಿಗಳಿಗೆ ಅವನ ಜ್ಞಾನಾನಂದಾದಿಗಳು ಸದೃಶ ಎಂದು ಭಾವಿಸಬಾರದು. ಭಗವಂತನ ಗುಣಗಳೆಲ್ಲವೂ ಅಲೌಕಿಕ ಮತ್ತು ಅಪರಿಮಿತ ಎಂದು ಭಾವಿಸಬೇಕು.

ತ್ರಿಪಾತ್ - ವೈದಿಕಪ್ರಯೋಗವಾದ್ದರಿಂದ ತ್ರಿಪಾತ್ ಎಂಬಲ್ಲಿ ಬಹುವಚನದ ಸ್ಥಾನದಲ್ಲಿ ಏಕವಚನವನ್ನು ಪ್ರಯೋಗ ಮಾಡಿದ್ದಾರೆ. ಭಗವಂತನ ನಾರಾಯಣ ವೈಕುಂಠ ವಾಸುದೇವಾದಿ ರೂಪಗಳು ದ್ಯುಲೋಕದಲ್ಲಿವೆ ಎಂದು ಹೇಳಲ್ಪಟ್ಟಿವೆ. ಇಲ್ಲಿ ದ್ಯುಲೋಕ ಎಂದರೆ ಲೋಕಗಳು ಭೂಃ ಭುವಃ ಸ್ವಃ ಎಂದು ಮೂರು ಎಂಬ ವಿವಕ್ಷೆಯಲ್ಲಿ ಒಂದು ಲಕ್ಷ ಯೋಜನ ಎತ್ತರವಿರುವ ಅಂತರಿಕ್ಷಕ್ಕಿಂತ ಎತ್ತರವಿರುವ ಲೋಕಗಳು ಎಂದರ್ಥ. ಭೂಲೋಕದಿಂದ ಬಹುಲಕ್ಷ ಯೋಜನದವರೆಗೆ ಎತ್ತರವಿರುವ ಶ್ವೇತದ್ವೀಪ ಅನಂತಾಸನಗಳು ದ್ಯುಲೋಕ ಎನಿಸಿವೆ. ವೈಕುಂಠವಂತೂ ಸತ್ಯಲೋಕದ ಮೇಲೆಯೇ ಇರುವುದರಿಂದ ದ್ಯುಲೋಕವಾಗಿದೆ. ಅದರಲ್ಲಿ ಶ್ವೇತದ್ವೀಪದಲ್ಲಿ ನಾರಾಯಣ ರೂಪವು ಅನಂತಾಸನದಲ್ಲಿ ವಾಸುದೇವ ರೂಪವು, ವೈಕುಂಠದಲ್ಲಿ ವೈಕುಂಠವೆಂಬ ರೂಪವೂ ಇದೆ.

ಎಲ್ಲ ಜೀವರಾಶಿಗಳು ಭಗವಂತನ ಕಿಂಚಿತ್ ಸಾದೃಶ್ಯವನ್ನು ಹೊಂದಿರುವುದರಿಂದ ಭಿನ್ನಪಾದ ಅಥವಾ ಭಿನ್ನಾಂಶ ಎನಿಸಿದ್ದಾರೆ. ನಾರಾಯಣ ವಾಸುದೇವ ವೈಕುಂಠ ರೂಪಗಳು ಮಾತ್ರ ಸ್ವರೂಪಾಂಶ ಎಂದು ಛಾಂದೋಗ್ಯ ಭಾಷ್ಯದಲ್ಲಿ ಹೇಳಲಾಗಿದೆ.

'ಸುದರ್ಶನಾಸ್ತ್ರಂ ಭಗವಾನ್ ಪ್ರಾಯುಂಕ್ತ ದಯಿತಂ ತ್ರಿಪಾತ್' ಎಂಬುದಾಗಿ ಭಾಗವತ ತೃತೀಯ ಸ್ಕಂಧದಲ್ಲಿ ತ್ರಿಪಾತ್ ಶಬ್ದವನ್ನು ವಿಷ್ಣುವಿನಲ್ಲಿಯೇ ಪ್ರಯೋಗಿಸಿರುವುದರಿಂದ ಇಲ್ಲಿಯೂ ಅದು ವಿಷ್ಣುಪರ ಎಂದು ತಿಳಿಯಬೇಕು ॥ 3 ॥

ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋಽಸ್ಯೇಹಾಭವತ್ಪುನಃ ।
ತತೋ ವಿಷ್ವಙ್ ವ್ಯಕ್ರಾಮತ್ಸಾಶನಾನಶನೇ ಅಭಿ ॥ 4 ॥

ಪೂರ್ವಂ 'ವಿಶ್ವಾ ಭೂತಾನಿ' ಇತಿ ಭಿನ್ನಜೀವರಾಶೇರೌಪಚಾರಿಕಪಾದತ್ವಮುಕ್ತಮ್ । ಅತ್ರ ಪುನಃ ಮುಖ್ಯ ಏವ ಚತುರ್ಥಪಾದಃ, ತಸ್ಯ ಪ್ರಾಗುಕ್ತಚತುರ್ಥಪಾದಸ್ಥಿತತ್ವಾದಿಮಹಿಮಾಂತರಂ ಚೋಚ್ಯತೇ ।

Rarest Archiver

ತ್ರಯಃ ಪಾದಾಃ ಅಸ್ಯೇತಿ 'ತ್ರಿಪಾತ್' ಪ್ರಾಗುಕ್ತರೂಪತ್ರಯವಾನ್ ಪುರುಷಃ । ದಿವಿ ಇತಿ ಪದಂ ಪಂಚಮ್ಯಂತತ್ವೇನ ವಿಪರಿಣಮ್ಯಾನುವರ್ತತೇ । ಪೃಥಿವ್ಯಂತರಿಕ್ಷರೂಪಲೋಕದ್ವಯೋಪಲಕ್ಷಣಮೇತತ್ । 'ದಿವಃ' ದ್ಯುಲೋಕೋಪಲಕ್ಷಿತಲೋಕತ್ರಯಾತ್, ಊರ್ಧ್ವೇ ಬಹಿಃ ಬಹಿಷ್ಠಶ್ವೇತದ್ವೀಪಾದಿಲೋಕತ್ರಯೇ 'ಉದೈತ್' ನಿತ್ಯೋದಿತೋ ವರ್ತತ ಇತ್ಯರ್ಥಃ । ಸಾರ್ವಕಾಲಿಕೋಽಯಂ ಲಙ್ । 'ಅಸ್ಯ' ಪುರುಷಸ್ಯ ಸ್ವರೂಪಭೂತಂ 'ಪುನಃ' ಅಪರಂ ರೂಪಮ್ 'ಇಹ' ಪ್ರಾಗುಕ್ತಭಿನ್ನಪಾದರೂಪೇಷು ಭೂತೇಷು ತನ್ನಿಯಾಮಕತ್ವೇನ 'ಅಭವತ್' ವರ್ತತ ಇತ್ಯರ್ಥಃ । ತದುಕ್ತಂ ದ್ವಿತೀಯಸ್ಕಂಧತಾತ್ಪರ್ಯೇ 'ಅನಂತಾಸನ-ವೈಕುಂಠನಾರಾಯಣಪುರಾಣಿ ತು । ತ್ರೀಣಿ ಧಾಮಾನಿ ವೈ ವಿಷ್ಣೋಃ ತ್ರಿಲೋಕಾದ್ ಬಹಿರೇವ ತು' ಇತಿ । ಯದ್ವಾ 'ದಿವಃ' ಇತ್ಯನುವರ್ತತೇ । ದ್ಯುಸ್ಥ ಇತ್ಯರ್ಥಃ । 'ಊರ್ಧ್ವಃ' ಇತ್ಯಸ್ಯ ಉನ್ನತ ಇತ್ಯರ್ಥಃ । 'ಪೃಥಿವ್ಯಾಂ ದ್ಯೌರ್ಮಹಾಮೇರುರಾಕಾಶೇ ಸೂರ್ಯಮಂಡಲಮ್ । ದಿವೀಂದ್ರಸದನಂ ಚೈವ ತತ್ಪರೇ ತು ದಿವಃ ಪರೇ' ಇತಿ ಛಾಂದೋಗ್ಯಭಾಷ್ಯೋಕ್ತಸ್ಮೃತ್ಯಾ ದ್ಯುಶಬ್ದವಾಚ್ಯೇಭ್ಯಃ ಮೇರುಸೂರ್ಯಮಂಡಲೇಂದ್ರ-ಸದನೇಭ್ಯಃ ಕ್ರಮಾಚ್ಛ್ವೇತದ್ವೀಪಾನಂತಾಸನವೈಕುಂಠಾನಾಮುನ್ನತತ್ವಾತ್, ತಸ್ಯ ನಾರಾಯಣ-ವಾಸುದೇವ-ವೈಕುಂಠಾಖ್ಯರೂಪತ್ರಯಾತ್ಮಕತಯಾ 'ತ್ರಿಪಾತ್ಪುರುಷಃ' 'ಊರ್ಧ್ವಃ' ಮುಖ್ಯಃ ಉನ್ನತಃ, ಉದೈತ್ ಸದೋದಿತೋಽಭಿವ್ಯಕ್ತೋ ವರ್ತತ ಇತ್ಯರ್ಥಃ । ಏವಂ ಚ ಲೋಕತ್ರಯವಿವಕ್ಷಯಾ ಅಂತರಿಕ್ಷಾ-ದುಪರಿತನಲೋಕೇಷು ಶ್ವೇತದ್ವೀಪಾದಿಷು ಸ್ಥಿತತ್ವೇನ ಪೂರ್ವಂ ದ್ಯುಸ್ಥತ್ವೋಕ್ತಾವಪಿ ಇಹ ಸ್ಮೃತ್ಯುಕ್ತ-ದ್ಯುಶಬ್ದಾರ್ಥೇಭ್ಯಃ ಊರ್ಧ್ವತ್ವೋಕ್ತಿರವಿರುದ್ಧಾ । ತದಾಹ ಸೂತ್ರಕಾರಃ । 'ಉಪದೇಶಭೇದಾನ್ನೇತಿ ಚೇನ್ನೋಭಯಸ್ಮಿನ್ನಪ್ಯವಿರೋಧಾತ್' ಇತಿ ಶ್ವೇತದ್ವೀಪಾದೌ ನಿತ್ಯಾಭಿವ್ಯಕ್ತತಯಾ ಸ್ಥಿತಿಃ ದೇವಾನಾಂ ಸೇವಾ-ದ್ಯರ್ಥಂ ತತ್ಪ್ರತ್ಯಯ ಇತಿ ಜ್ಞೇಯಮ್ । ನಾರಾಯಣಪಾದಸೇವಾ ಏವಂ ತಾನ್ಯಾಪ್ನುವಂತಿ ಚ ಇತಿ ತಾತ್ಪರ್ಯೋಕ್ತೇಃ । 'ಪಾದೋಸ್ಯ' ಇತ್ಯಸ್ಯ ತು 'ಸ ಏವಾನ್ಯಸ್ವರೂಪೇಣ ಶಕ್ರಲೋಕಸಮೀಪಗಃ । ಇಜ್ಯೋ ಯಜ್ಞ ಪುಮಾನ್ನಾಮ ಜ್ಞಾನಿನಾಂ ಗೃಹಿಣಾಂ ಪದಮ್ । ಯತೀನಾಂ ಧೃವಲೋಕಸ್ಥಃ ಮುನೀನಾಂ ಮೇರುಮಧ್ಯಗಃ । ಆದಿತ್ಯಮಂಡಲಸ್ಥಸ್ತು ಜ್ಞಾನಿನಾಂ ಬ್ರಹ್ಮಚಾರಿಣಾಮ್' ಇತಿ ಬ್ರಹ್ಮಾಂಡಸ್ಮೃತ್ಯುಕ್ತರೀತ್ಯಾ ಅಸ್ಯ ಪುರುಷಸ್ಯ ಪುನಃ ಪಾದಃ, ಅನ್ಯದ್ರೂಪಂ 'ಇಹ' ದಿವಿ ತ್ರಿಲೋಕ್ಯಂತಾಃ ಮೇರುಸೂರ್ಯ-ಮಂಡಲೇಂದ್ರಲೋಕಸಮೀಪಸ್ಥವೈಶ್ವಾನರಲೋಕಃ ಧ್ರುವಲೋಕೇಷು ಚತುರ್ಷು ಕ್ರಮಾತ್ ವಾನಪ್ರಸ್ಥ-ಬ್ರಹ್ಮಚಾರಿ-ಗೃಹಸ್ಥ-ಯತಿಭಿಃ ಜ್ಞಾನಿಭೂತೈಃ ಪೂಜ್ಯಃ ಸನ್ ತೇಷಾಮಾಶ್ರಯತಯಾ 'ಅಭವತ್' ಅವರ್ತತ ಸದಾ ವರ್ತತ ಇತ್ಯರ್ಥಃ । ಮಹಾಮಹಿಮಾಂತರಮಾಹ ತತೋ ವಿಷ್ವಙ್ ವ್ಯಕ್ರಾಮದಿತಿ । 'ತತಃ' ಇತ್ಯನಂತರಂ 'ಜ್ಯಾಯಾನ್' ಇತ್ಯನುಕರ್ಷೋ ವಾ 'ಪಾದೋಽಸ್ಯ' ಇತ್ಯಾದಿನೋಕ್ತಸ್ಯ 'ತತಃ' ಇತ್ಯನು-ವಾದೋ ವಾ । ಪೂರ್ವೋಕ್ತಮಾಹಾತ್ಮ್ಯಾದಪಿ ಜ್ಯಾಯಾನ್ ಇತಿ ತ್ರಿಪಾತ್ ಪುರುಷ ಇತಿ ವಾ । ತತೋ ಹೇತೋರಿತಿ ಪ್ರಾಗುಕ್ತಸ್ಯೋಪಸಂಹಾರೋ ವಾ । ವಿವಿಧಂ ಸುಷ್ಠು ಅಂಚತೀತಿ ವಾ ವಿವಿಧಸ್ಥಾನೇಷು

Rarest Archiver

ಶ್ವೇತದ್ವೀಪಾದಿಷು ಸುಷ್ಠು ಅಂಚತಿ ಸ್ವಪ್ರಭಯಾ ತಿಷ್ಠತಿ ಇತಿ ವಾ । ಸೂರ್ಯಮಂಡಲಾದಿವಿವಿಧಸ್ಥಾನೇಷು ಜ್ಞಾನಿವನಸ್ಥಪ್ರಭೃತಿಭಿಃ ಸುಷ್ಠು ಪೂಜ್ಯತಯಾ ರೂಪಾಂತರೇಣ ಸ್ಥಿತತಯಾ ವಾ । ವಿಷ್ವಕ್ ಶಬ್ದಿತಃ 'ತ್ರಿಪಾತ್' ಪುರುಷಃ ವಿವಿಧಪ್ರಜಾಸು ಸುರನರತಿರ್ಯಗಾದಿಪ್ರಾಣಿಷು 'ವ್ಯಕ್ರಾಮತ್' ಆಕ್ರಾಂತವಾನ್ ಸರ್ವತ್ರ ವ್ಯಾಪ್ತೋ ವರ್ತತ ಇತ್ಯರ್ಥಃ । ಕಿಂಚ ಸಾಶನಾನಶನೇ ಅಭಿ । ಸಾಶನಂ ಚ ಅನಶನಂ ಚ ಸಾಶನಾನಶನೇ । ಅನಶನಾಃ ದೇವಾಃ ಸಾಶನಾಃ ತದಿತರವಿದ್ವಜ್ಜನಾಃ ಋಷ್ಯಾದಯಃ ಏಕವಚನಂ ಸಮುದಾಯಾಭಿ-ಪ್ರಾಯಮ್ । ತದುಭಯಸಮುದಾಯಮ್ 'ಅಭಿ'ವ್ಯತಿ । ಅಭಿವ್ಯಾಪ್ಯೇತಿ ವಾ 'ವ್ಯಕ್ರಾಮತ್' ವಿಶೇಷೇಣಾಕ್ರಮ್ಯ ಸ್ಥಿತವಾನಿತಿ । ತದುಕ್ತಂ ದ್ವಿತೀಯಸ್ಕಂಧತಾತ್ಪರ್ಯೇ 'ತ್ರಿಪಾತ್ಸ ಏವ ಭಗವಾನ್ ಸರ್ವಪ್ರಾಣಿಷು ಚ ಸ್ಥಿತಃ । ನಿರನ್ನೇಷು ಚ ವಿದ್ವತ್ಸು ತ್ರಿದಶೇಷ್ವಿತರೇಷು ಚ' ಇತಿ । ಯದ್ವಾ ವಿಷ್ವಕ್ ತ್ರಿಪಾತ್ಪುರುಷಃ ಸಾಶನಾನಶನೇ ಚೇತನಾಚೇತನೇ 'ಅಭಿ' ವ್ಯಾಪ್ಯ ತನ್ನಿಯಂತೃತಯೇತಿ । ವ್ಯಕ್ರಾಮದಿ-ತ್ಯೇಕಾನ್ವಯಿತಯಾ ಯೋಜ್ಯಮ್ ॥ 4 ॥

ಮೂರು ರೂಪಗಳುಳ್ಳ ಪರಮಪುರುಷನು ಪೃಥಿವ್ಯಂತರಿಕ್ಷ ದ್ಯುಲೋಕಗಳಿಗಿಂತ ಬಹಿರ್ಭೂತನಾಗಿ ಶ್ವೇತದ್ವೀಪ-ಅನಂತಾಸನ-ವೈಕುಂಠಗಳಲ್ಲಿ ಯಾವಾಗಲೂ ಇರುವನು. ಅವನ ಮತ್ತೊಂದು ರೂಪವು ಭಿನ್ನಾಂಶವೆನಿಸದ ಜೀವರಲ್ಲಿ ನಿಯಾಮಕನಾಗಿರುತ್ತದೆ. ಅಥವಾ ಶ್ವೇತದ್ವೀಪ-ಅನಂತಾಸನ-ವೈಕುಂಠವೆಂಬ ಮೂರುಲೋಕಗಳಲ್ಲಿರುವ ಮೂರು ರೂಪಗಳುಳ್ಳ ದ್ಯುಶಬ್ದವಾಚ್ಯವಾದ ಮೇರುಪರ್ವತ-ಸೂರ್ಯಮಂಡಲ ಮತ್ತು ಇಂದ್ರಸದನಕ್ಕಿಂತ ಎತ್ತರದಲ್ಲಿದ್ದಾನೆ. ಈ ಭಗವಂತನ ಮತ್ತೊಂದು ರೂಪವು ಮೇರು-ಸೂರ್ಯಮಂಡಲ ಇಂದ್ರಲೋಕದ ಹತ್ತಿರದಲ್ಲಿರುವ ವೈಶ್ವಾನರ ಲೋಕ-ಧ್ರುವಲೋಕಗಳಲ್ಲಿ ಕ್ರಮವಾಗಿ ಜ್ಞಾನಿಗಳಾದ ವಾನಪ್ರಸ್ಥ - ಬ್ರಹ್ಮಚಾರಿ - ಗೃಹಸ್ಥ- ಯತಿಗಳಿಂದ ಪೂಜ್ಯವಾಗಿ ಅವರಿಗೆ ಆಶ್ರಯವಾಗಿದೆ. ಆದ್ದರಿಂದ ಶ್ವೇತದ್ವೀಪಾದಿ ವಿವಿಧ ಸ್ಥಾನಗಳಲ್ಲಿ ಪ್ರಕಾಶಮಾನನಾದ ಅಥವಾ ಆ ಸ್ಥಾನಗಳಲ್ಲಿ ಜ್ಞಾನಿಗಳಲ್ಲಿ ಚನ್ನಾಗಿ ಪೂಜ್ಯನಾದ ಭಗವಂತನು ಸರ್ವತ್ರ ವ್ಯಾಪ್ತನಾಗಿದ್ದಾನೆ. ಮತ್ತು ದೇವಋಷ್ಯಾದಿಗಳಲ್ಲಿ ಚೇತನಾಚೇತನಗಳಲ್ಲಿ ವ್ಯಾಪ್ತನಾಗಿದ್ದಾನೆ.

ವಿಶೇಷ ವಿಚಾರ :- ಹಿಂದಿನ ಮಂತ್ರದಲ್ಲಿ ಜೀವರಾಶಿಯು ಭಗವಂತನ ಭಿನ್ನಪಾದ ಎಂದು ಔಪಚಾರಿಕವಾಗಿ ಪಾದಶಬ್ದವನ್ನು ಇಟ್ಟುಕೊಳ್ಳಲಾಗಿತ್ತು. ಈ ಮಂತ್ರದಲ್ಲಿ ಪಾದಶಬ್ದಕ್ಕೆ ಭಗವದ್ರೂಪ ಎಂಬ ಮುಖ್ಯಾರ್ಥವನ್ನೇ ಇಟ್ಟುಕೊಂಡು ಆ ಭಗವದ್ರೂಪದಲ್ಲಿರುವ ಮಹಿಮೆಯು ಹೇಳಲ್ಪಡುತ್ತದೆ.

ಹಿಂದಿನ ಮಂತ್ರದಲ್ಲಿರುವ 'ದಿವಿ' ಎಂಬುದನ್ನು 'ದಿವಃ' ಎಂದು ಪರಿಣಾಮಮಾಡಿ ಇಲ್ಲಿ ಇಟ್ಟುಕೊಳ್ಳಬೇಕು. 'ದಿವಃ ಊರ್ಧ್ವೇ' ಎಂದು ಅನ್ವಯ ಮಾಡಬೇಕು. 'ಉದೈತ್' ಎಂಬಲ್ಲಿರುವ ಲಙ್ ಸಾರ್ವಕಾಲಿಕ. ಆದ್ದರಿಂದ ದ್ಯುಶಬ್ದದಿಂದ ಉಪಲಕ್ಷಿತವಾದ ಪೃಥಿವೀ ಅಂತರಿಕ್ಷದ್ಯುಲೋಕಗಳಿಗಿಂತ ಬಹಿರ್ಭೂತವಾದ ಶ್ವೇತದ್ವೀಪ ಅನಂತಾಸನ ವೈಕುಂಠಗಳಲ್ಲಿ ಭಗವದ್ರೂಪಗಳು ನಿತ್ಯೋದಿತ ಎಂದು ಅರ್ಥವಾಗುತ್ತದೆ.

ಅಥವಾ 'ಪೃಥಿವಿಯಲ್ಲಿ ಮೇರು ಪರ್ವತಕ್ಕೂ, ಆಕಾಶದಲ್ಲಿ ಸೂರ್ಯಮಂಡಲಕ್ಕೂ, ಸ್ವರ್ಗದಲ್ಲಿ ಇಂದ್ರಸದನಕ್ಕೂ 'ದ್ಯುಲೋಕ' ಎಂಬ ವ್ಯವಹಾರವಿದೆ. ಆದ್ದರಿಂದ 'ದಿವಃ' ಎಂಬುದಕ್ಕೆ ಮೇರುಪರ್ವತಾದಿಗಳು ಎಂದೂ ಅರ್ಥೈಸಬಹುದು. ಶ್ವೇತದ್ವೀಪಾದಿಗಳಲ್ಲಿರುವ ವಿಷ್ಣುವು ದ್ಯುಲೋಕಕ್ಕಿಂತಲೂ ಉನ್ನತ ಎಂದು ಅರ್ಥವಾಗುತ್ತದೆ. ಆದ್ದರಿಂದ ಹಿಂದಿನ

Rarest Archiver

ಮಂತ್ರವ್ಯಾಖ್ಯಾನದಲ್ಲಿ ದ್ಯುಲೋಕ ಎಂದಿಟ್ಟುಕೊಂಡಾಗ ಭಗವಂತನಿಗೆ ದ್ಯುಲೋಕಸ್ಥತ್ವವನ್ನೂ, ಇಲ್ಲಿ ಹೇಳಿದಂತೆ ಮೇರು ಮುಂತಾದವುಗಳು ದ್ಯುಶಬ್ದವಾಚ್ಯ ಎಂದಿಟ್ಟುಕೊಂಡಾಗ 'ದಿವಃ ಪರತ್ವ' (ದ್ಯುಲೋಕಕ್ಕಿಂತ ಉನ್ನತತ್ವ) ವನ್ನೂ ತಿಳಿಯ-ಬೇಕು. 'ಉಪದೇಶಭೇದಾತ್...' ಇತ್ಯಾದಿ ಸೂತ್ರದಲ್ಲಿ ಇದನ್ನು ನಿರ್ಣಯಿಸಿದ್ದಾರೆ.

ತಸ್ಮಾದ್ ವಿರಾಳಜಾಯತ ವಿರಾಜೋ ಅಧಿ ಪೂರುಷಃ ।
ಸ ಜಾತೋ ಅತ್ಯರಿಚ್ಯತ ಪಶ್ಚಾದ್ ಭೂಮಿಮಥೋ ಪುರಃ ॥ 5 ॥

ಪಂಚಮೀ ತಸ್ಮಾದ್ವಿರಾಡಿತ್ಯಾದಿ । ಪ್ರಾಗುಕ್ತಮಹಿಮವತಃ ಪುರುಷಾತ್ ಸ್ವರ್ಣಮಯತಯಾ ವಿಶೇಷೇಣ ರಾಜತ ಇತಿ ವಿರಾಟ್‌ಶಬ್ದಿತಂ ಬ್ರಹ್ಮಾಂಡಂ ಅಜಾಯತ । ತಥಾ ವಿರಾಜಃ 'ಅಧಿ' ಅಂಡಮಭಿವ್ಯಾಪ್ಯ । ವಿರಾಣ್ಣಾಮಾ ಪುರುಷಃ ಚತುರ್ಮುಖಃ ಅಜಾಯತ ತಥಾ । ವಿರಾಣ್ಣಾಮಾ ಬ್ರಹ್ಮ । ತಸ್ಮಾತ್ । ಪುರುಷಾತ್ ಹರೇಃ ನಾಭಿಪದ್ಮಾತ್ ರೂಪಾಂತರೇಣ ಅಜಾಯತ ಭೌತಿಕದೇಹೇಂದ್ರಿ-ಯಾದಿಯುಕ್ತಃ ಸನ್ ಉದಭೂತ್ ಇತ್ಯರ್ಥಃ । ತಸ್ಮಾತ್ ಕಾರಣಾತ್ । ವಿರಾಜಃ, ಚತುರ್ಮುಖಾತ್ ಪುರುಷಃ ಪೂರ್ವಪ್ರಕೃತಪುರುಷಶಬ್ದಮುಖ್ಯಾರ್ಥಃ ಹರಿಃ, ಅಧಿ, ಅಧಿಕಃ ಇತ್ಯಾವೃತ್ಯಾ ಯೋಜ್ಯಮ್ ।

ಸ ಜಾತಃ ಚತುರ್ಮುಖಃ ಪಶ್ಚಾತ್ ಜಾತಾಮ್ ಇತಿ ಯೋಜ್ಯಮ್ । ಭೂಮಿಂ ಭೂಮ್ಯುಪ-ಲಕ್ಷಿತಸರ್ವಲೋಕಸ್ಥಿತಶಂಕರಪೂರ್ವಕಾಶೇಷಜೀವಜಾತಂ ಅಥೋ ಪುರಃ ಪೂರ್ವಂ ಜಾತಂ ಬ್ರಹ್ಮಾಂಡಂ ತದಭಿಮಾನಿನಶ್ಚ, ಅತ್ಯರಿಚ್ಯತ, ಅತಿರಿಚ್ಯ ವರ್ತತೇ । ತೇಷಾಮಧಿಪತಿರಭೂದಿತ್ಯರ್ಥಃ । ತದುಕ್ತಂ ತಾತ್ಪರ್ಯೇ 'ತಸ್ಮಾದ್ಧರೇರಂಡಮಭೂದಂಡಾದಪಿ ಚತುರ್ಮುಖಃ । ಸ ವಿರಾಣ್ಣಾಮಕಸ್ತಸ್ಮಾದಧಿಕೋ ಹರಿರೇವ ತು । ಅಂಡಾಜ್ಜಾತಸ್ಯಾನ್ಯರೂಪಂ ನಾಭಿಪದ್ಮಾದಭೂದ್ಧರೇಃ । ಯದೋಭಯಾತ್ಮಕೋ ಜಜ್ಞೇ ಬ್ರಹ್ಮಾ ಲೋಕಪಿತಾಮಹಃ । ತದೈವ ಸೋಽತಿರಿಕ್ತೋಽಭೂಚ್ಛರ್ವಪೂರ್ವಾಮರಾನ್ ಜನಾನ್' ॥ 5 ॥

ಆ ಪುರುಷನಿಂದ ಸುವರ್ಣಮಯವಾದ ಪ್ರಕಾಶಮಾನವಾದ ಬ್ರಹ್ಮಾಂಡವು ಹುಟ್ಟಿತು. ಬ್ರಹ್ಮಾಂಡವನ್ನು ವ್ಯಾಪಿಸಿ ವಿರಾಟ್ ನಾಮಕ ಚತುರ್ಮುಖ ಬ್ರಹ್ಮದೇವರು ಜನಿಸಿದರು. ಬ್ರಹ್ಮಾಂಡದಲ್ಲಿ ವಿಷ್ಣುವಿನ ನಾಭಿಕಮಲದಿಂದಲೂ ಭೌತಿಕ ದೇಹೇಂದ್ರಿಯ ಯುಕ್ತರಾಗಿ ಜನಿಸಿದರು. ಆ ಕಾರಣದಿಂದ ಪುರುಷ ನಾಮಕ ವಿಷ್ಣುವು ಬ್ರಹ್ಮ ದೇವರಿಗಿಂತ ಉತ್ತಮನು. ಚತುರ್ಮುಖ ಬ್ರಹ್ಮದೇವರು ಅನಂತರ ಜನಿಸಿದ ಭೂಮಿ ಮೊದಲಾದ ಸರ್ವಲೋಕದಲ್ಲಿರುವ ದೇವತೆಗಳಿಗಿಂತ ಮೊದಲೇ ಜನಿಸಿದ್ದ ಬ್ರಹ್ಮಾಂಡ ಮತ್ತು ಅದರ ಅಭಿಮಾನಿದೇವತೆಗಳಿಗೂ ಅಧಿಪತಿಗಳಾದರು.

ವಿಶೇಷ ವಿಚಾರ - ಈ ಮಂತ್ರಕ್ಕೆ ಮಾಡಿದ ವ್ಯಾಖ್ಯಾನಕ್ಕೆ ಈ ಕೆಳಗಿನ ಭಾಗವತ ತಾತ್ಪರ್ಯ ಶ್ಲೋಕವು ಸಂವಾದಿಯಾಗಿದೆ.

ತಸ್ಮಾದ್ಧರೇರಂಡಮಭೂತ್ ಅಂಡಾದಪಿ ಚತುರ್ಮುಖಃ ।
ಸ ವಿರಾಣ್ಣಾಮಕಸ್ತಸ್ಮಾದಧಿಕೋ ಹರಿರೇವ ತು ॥

ಅಂಡಾಜ್ಜಾತಸ್ಯಾನ್ಯರೂಪಂ ನಾಭಿಪದ್ಮಾದಭೂದ್ಧರೇಃ ।

Rarest Archiver

ಯದೋಭಯಾತ್ಮಕೋ ಜಜ್ಞೇ ಬ್ರಹ್ಮಾ ಲೋಕಪಿತಾಮಹಃ ॥
ತದೈವ ಸೋಽತಿರಿಕ್ತೋಽಭೂತ್ ಶರ್ವಪೂರ್ವಂ ಪರಂ ಜಗತ್ ।

ಶ್ರೀಹರಿಯಿಂದ ಬ್ರಹ್ಮಾಂಡ ಜನಿಸಿತು. ಬ್ರಹ್ಮಾಂಡದಿಂದ ವಿರಾಟ್ ಚತುರ್ಮುಖ ಬ್ರಹ್ಮದೇವರು ಜನಿಸಿದರು. ಅವರಿಗಿಂತ ವಿಷ್ಣುವು ಉತ್ತಮನು. ಬ್ರಹ್ಮದೇವರಿಗೆ ಬ್ರಹ್ಮಾಂಡದಿಂದ ಹುಟ್ಟಿದ ರೂಪಕ್ಕಿಂತ ಬೇರೆಯಾದ ಮತ್ತೊಂದು ರೂಪವು ಶ್ರೀವಿಷ್ಣುವಿನ ನಾಭಿಕಮಲದಿಂದ ಜನಿಸಿತು. ಹೀಗೆ ಬ್ರಹ್ಮದೇವರು ಎರಡು ರೂಪದಿಂದ ಜನಿಸಿದ ಪ್ರಯುಕ್ತ ರುದ್ರಾದಿಗಳಿಗಿಂತ ಉತ್ತಮರಾಗಿದ್ದಾರೆ. ॥ 5 ॥

ಯತ್ ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ 6 ॥

ದ್ವಿತೀಯವರ್ಗೇ ಆದ್ಯಾ ಋಕ್- ಯತ್ಪುರುಷೇಣೇತಿ । ತದಾನೀಂ ಯಜ್ಞಸಾಧನಾನಾಮಭಾವಾತ್ ತತ್ಸಿದ್ಧ್ಯರ್ಥಂ ಮಾನಸಯಜ್ಞೇನ ಭಗವಂತಮಾರಾಧಿತವಂತೋ ದೇವಾ ಇತ್ಯುಚ್ಯತೇ । ಯತ್ ಯದಾ ಯೇನ ಪುರುಷೇಣೇತಿ ವಾ । ತಥಾತ್ವೇ ತಮ್ ಇತ್ಯಗ್ರೇತನತಚ್ಛಬ್ದೇನಾನ್ವಯಃ । ಪುರುಷೇಣ ಹವಿಷಾ ಮನಸಾ ಸಂಕಲ್ಪಿತಚತುರ್ಮುಖಾಖ್ಯಪಶೂರೂಪಹವಿಷಾ ಯಜ್ಞಂ ವಿಷ್ಣುಮುದ್ದಿಶ್ಯ 'ಯಜ್ಞೋ ವಿಷ್ಣು-ರ್ದೇವತಾ' ಇತಿ ಶ್ರುತೇಃ । ಯಜ್ಞಂ ಯಾಗಕರ್ಮೇತ್ಯಪ್ಯರ್ಥಃ । ದೇವಾಃ ಅತನ್ವತ ಅಕುರ್ವಂತ । ತದಾ ಅಸ್ಯ ಯಜ್ಞಕರ್ಮಣಃ ವಸಂತಃ ವಸಂತರ್ತುಃ ಆಜ್ಯಮಾಸೀತ್ ಆಜ್ಯತ್ವೇನ ಸಂಕಲ್ಪಿತೋ ವಸಂತಃ । ಏವಮಗ್ರೇಽಪಿ । ಗ್ರೀಷ್ಮಃ ಇಧ್ಮ ಆಸೀತ್ । ಶರತ್ ಋತುಃ ಹವಿಃ ಪುರೋಡಾಶರೂಪಹವಿರಾಸೀತ್ ಇತ್ಯರ್ಥಃ ॥ 6 ॥

ಯಾವಾಗ ದೇವತೆಗಳು ಚತುರ್ಮುಖ ಬ್ರಹ್ಮ ದೇವರನ್ನು ಪಶುವನ್ನಾಗಿ ಸಂಕಲ್ಪಿಸಿ ಮಾನಸ ಯಜ್ಞದಿಂದ ವಿಷ್ಣುವನ್ನು ಆರಾಧಿಸಿದರೋ ಆಗ ಆ ಮಾನಸ ಯಜ್ಞಕ್ಕೆ ವಸಂತ ಋತುವೇ ತುಪ್ಪವಾಗಿತ್ತು. ಗ್ರೀಷ್ಮ ಋತುವೇ ಇಂಧನ(ಕಟ್ಟಿಗೆ)-ವಾಗಿತ್ತು. ಶರತ್‌ಋತುವೇ ಪುರೋಡಾಶರೂಪ ಹವಿಸ್ಸಾಗಿತ್ತು.

ವಿಶೇಷ ವಿಚಾರ - ಬ್ರಹ್ಮಾದಿ ದೇವತೆಗಳೆಲ್ಲರೂ ಹುಟ್ಟಿದ ಬಳಿಕ ಅವರಿಗೆ ಯಜ್ಞಸಾಧನವಾವುದೂ ಇದ್ದಿಲ್ಲ-ವಾದ್ದರಿಂದ ಯಜ್ಞಸಾಧನ ಸಾಮಗ್ರಿಯ ಸೃಷ್ಟಿಯಾಗಲಿ ಎಂಬ ಉದ್ದೇಶದಿಂದ ಅವರೆಲ್ಲ ಮಾನಸ ಯಜ್ಞವನ್ನು ಆಚರಿಸಿದರೆಂದು ಇಲ್ಲಿ ತಿಳಿಸಲಾಗಿದೆ.

ಸಪ್ತಾಸ್ಯಾಸನ್ ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್ ॥ 15 ॥

ಅಥ ದ್ವಿತೀಯಾ- ಸಪ್ತಾಸ್ಯಾಸನ್ನಿತಿ । ಅಸ್ಯ ಮಾನಸಯಜ್ಞಸ್ಯ ಸಪ್ತಗಾಯತ್ರ್ಯಾದಿ ಛಂದಾಂಸಿ ಪರಿಧಯಃ ಆಸನ್ ಅಭವನ್ । ಆಹವನೀಯಾಗ್ನೇಃ ತ್ರಯಃ ಪರಿಧಯಃ ಉತ್ತರವೇದಿಗತಾಃ ತ್ರಯಃ ಆದಿತ್ಯಶ್ಚ

Rarest Archiver

ಸಪ್ತಮಪರಿಧಿಃ ಪರಿಧಿಪ್ರತಿ(ನಿಧಿರೂಪಾ)ನಿಧಯ ಇತಿ ಭಾವಃ । ನ ಪುರಸ್ತಾತ್ಪರಿದಧಾತ್ಯಾದಿತ್ಯೋ ಹ್ಯೇವೋದ್ಯನ್ ಪುರಸ್ತಾದ್ರಕ್ಷಾಂಸ್ಯಪಹಂತಿ ಇತಿ ಶ್ರುತೇಃ । ಏತೇ ಆದಿತ್ಯಸಹಿತಾಃ ಸಪ್ತ ಪರಿಧಯಃ ಸಪ್ತ ಛಂದೋರೂಪಾಃ ತಥಾ ಸಮಿಧಃ ತ್ರಿಗುಣಿತಸಪ್ತಸಂಖ್ಯಾಕಾಃ ಏಕವಿಂಶತಿಃ ಕೃತಾಃ 'ದ್ವಾದಶಮಾಸಾಃ ಪಂಚರ್ತವಃ ತ್ರಯ ಇಮೇ ಲೋಕಾಃ ಅಸಾವಾದಿತ್ಯ ಏಕವಿಂಶಃ' ಇತಿ ಶ್ರುತೇಃ ಏಕವಿಂಶತಿಪದಾರ್ಥಾಃ ತ್ರಿಃಸಪ್ತ ಸಮಿಧಃ ಇಧ್ಮತ್ವೇನ ಕೃತಾಃ । ಯೇ ಚ ಪರಾಃ ದೇವಾಃ ಯಜ್ಞಂ ವಿಷ್ಣುಂ ಪ್ರತಿ ತಮುದ್ದಿಶ್ಯ ಯಜ್ಞಂ ತನ್ವಾನಾಃ ಕುರ್ವಾಣಾಃ ಪಶುಂ ಪಶುತ್ವೇನ ಭಾವಿತಂ ಪುರುಷಂ ಚತುರ್ಮುಖಂ ಅಬಧ್ನನ್ ಯೂಪೇ ನಿಯೋಜಿತವಂತಃ ತದಾ ಸಪ್ತಾಸ್ಯಾಸನ್ನಿತ್ಯಾದಿ ಯೋಜನಾ । ಅಸ್ಯ ಮಂತ್ರಸ್ಯ ಏತತ್ಸೂಕ್ತಸ್ಯೋಪಾಂತತ್ವೇನ ಬಹ್ವೃಚಾನಾಂ ಪಾಠೇಽಪಿ ಪಾಠಕ್ರಮಾದರ್ಥಕ್ರಮಸ್ಯ ಬಲವತ್ವೇನ ತದರ್ಥಸ್ಯಾತ್ರ ಸಂಗತತ್ವಾತ್ ಯಜು-ಷಾಣಾಂ ಅತ್ರೈವ ಪಾಠಾಚ್ಚ ಅಯಂ ಮಂತ್ರಃ ಅತ್ರ ವ್ಯಾಖ್ಯಾತಃ ॥ 15 ॥

ಯಾವಾಗ ದೇವತೆಗಳು ಮಾನಸ ಯಜ್ಞವನ್ನು ಮಾಡುವವರಾಗಿ ಚತುರ್ಮುಖ ಬ್ರಹ್ಮ ದೇವರನ್ನು ಪಶುವನ್ನಾಗಿ ಸಂಕಲ್ಪಿಸಿ ಯಾವ ಸ್ತಂಭಕ್ಕೆ ಕಟ್ಟಿದರೋ, ಆಗ ಗಾಯತ್ರೀ ಮೊದಲಾದ ಸಪ್ತ ಛಂದಸ್ಸುಗಳೇ ಏಳು ಪರಿಧಿಗಳಾದವು, ಹನ್ನೆರಡು ಮಾಸಗಳು, ಐದು ಋತುಗಳು ಮೂರು ಲೋಕಗಳು ಮತ್ತು ಸೂರ್ಯ ಇವರು ಇಪ್ಪತ್ತೊಂದು ಸಮಿಧೆಗಳಾದರು.

ವಿಶೇಷ ವಿಚಾರ - ಯಜುರ್ವೇದದಲ್ಲಿ ಇದು ಏಳನೇಯ ಋಕ್. ಋಗ್ವೇದ ಪಾಠದಲ್ಲಿ ಇದು ಹದಿನೈದನೆಯ ಮಂತ್ರವಾಗಿದೆ. ಇಲ್ಲಿ ಮಾನಸಯಜ್ಞದ ವಿವರಣೆ ಪ್ರಸಕ್ತವಾದುದರಿಂದ ಇದೂ ಕೂಡ ಮಾನಸ ಯಜ್ಞದ ವಿವರಣೆ ರೂಪವಾದ್ದರಿಂದ ಪಾಠಕ್ರಮಕ್ಕಿಂತ ಅರ್ಥಕ್ರಮವು ಪ್ರಬಲ ಎಂಬ ನ್ಯಾಯಕ್ಕನುಸಾರವಾಗಿ ಇಲ್ಲಿ ವ್ಯಾಖ್ಯಾನ ಮಾಡಲಾಗಿದೆ.

ಸಪ್ತಾಸ್ಯಾಸನ್ ಪರಿಧಯಃ - ಆಹವನೀಯಾಗ್ನಿಗೆ ಮೂರು ಪರಿಧಿಗಳು. ಉತ್ತರ ವೇದಿಗೆ ಮೂರು ಪರಿಧಿಗಳು (ಪರಿಧಿ ಎಂದರೆ ಯಜ್ಞವನ್ನು ಕೆಡಿಸಲು ಬರುವ ರಾಕ್ಷಸರನ್ನು ತಡೆಯಲು ಸುತ್ತಲೂ ಹಾಕುವ ಕಾಷ್ಠವಿಶೇಷ) ಪೂರ್ವದಿಕ್ಕಿನಲ್ಲಿ ಉದಯಿಸುವ ಸೂರ್ಯನೇ ರಾಕ್ಷಸರನ್ನು ತಡೆಯುತ್ತಾನೆ ಎಂದು ಪ್ರಮಾಣವಿರುವುದರಿಂದ ಪೂರ್ವದಲ್ಲಿ ಸೂರ್ಯನೇ ಪರಿಧಿ. ಒಟ್ಟು ಏಳು ಪರಿಧಿಗಳು.

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ 7 ॥

ಬಹ್ವೃಚಾನಾಂ ಪಾಠಕ್ರಮೇ ತು 'ತಂ ಯಜ್ಞಮ್' ಇತಿ ಋಕ್ ದ್ವಿತೀಯಾ ಜ್ಞೇಯಾ । ಯಜ್ಞಂ ಯಜ್ಞಸಾಧನಭೂತಂ ತಂ ಯೂಪೇ ಮನಸಾ ಬದ್ಧಂ ವಾ ಪಶುತ್ವೇನ ಕಲ್ಪಿತಂ ವಾ ಸ ಜಾತ ಇತ್ಯಾದಿನಾ ಪ್ರಕೃತಂ ವಾ ಪುರುಷಂ ಮನಸಾ ಬರ್ಹಿಷಿ ದರ್ಭಸಂಸ್ತರೇ । ಯದ್ವಾ ಬರ್ಹಿರಿತಿ ಯಜ್ಞನಾಮ । ಯಜ್ಞೇ ಪ್ರೌಕ್ಷನ್ ಅದ್ಭಿಸ್ಸೇಚಿತವಂತಃ । 'ಉಕ್ಷ ಸೇವನೇ' ಸೇಚನಪರ್ಯಗ್ನಿಕರಣಾದಿ ಸಂಸ್ಕಾರಂ ಕೃತವಂತ ಇತ್ಯರ್ಥಃ । ಪರಮಪುರುಷವ್ಯಾವೃತ್ತ್ಯರ್ಥಮುಕ್ತಂ- ಅಗ್ರತೋ ಜಾತಂ ಪುರುಷಮಿತಿ । ಹರೇಃ ಪ್ರಥ-

Rarest Archiver

ಮತೋ ಜಾತಮಿತ್ಯರ್ಥಃ । 'ತೇನ' ಪುರುಷರೂಪೇಣ ಪಶುನಾ ಯೇ ದೇವಾಃ ಸಾಧ್ಯಾ ಋಷಯಶ್ಚ ತೇ ಸರ್ವೇ 'ಯಜ್ಞಮ್' ಇತ್ಯನುಷಂಗಃ । ಯಜ್ಞಂ ಇಜ್ಯತ್ವಹೇತುನಾ ಯಜ್ಞನಾಮಕಂ ಪ್ರಾಕ್ಪುರುಷಪದೇನ ಪ್ರಕೃತಂ ವಿಷ್ಣುಂ ಅಯಜಂತ ಆರಾಧಿತವಂತಃ । ಯದ್ವಾ 'ವಿಷ್ಣುಂ ರುದ್ರೇಣ ಪಶುನಾ ಬ್ರಹ್ಮಾ ಜ್ಯೇಷ್ಠೇನ ಸೂನುನಾ । ಅಯಜನ್ಮಾನಸೇ ಯಜ್ಞೇ ಪಿತರಂ ಪ್ರಪಿತಾಮಹಃ' ಇತಿ ಚತುರ್ಥಗೀತಾಭಾಷ್ಯೋಕ್ತರೀತ್ಯಾ ಅತ್ರ ಮಂತ್ರೇಷು ಪಶುಪುರುಷೋ ರುದ್ರೋ ಧ್ಯೇಯಃ । ಬ್ರಹ್ಮಾ ಯಜಮಾನಃ ದೇವಾಃ ಋತ್ವಿಜಃ । ತತಶ್ಚಾಯಮರ್ಥಃ । 'ವಿರಾಜೋಽಧಿಪುರುಷ' ಇತ್ಯಸ್ಯ ವಿರಾಜಃ ಚತುರ್ಮುಖಾತ್ ಅಧಿ 'ರುದ್ರಂ ಸಮಾಶ್ರಿತಾ ದೇವಾಃ' ಇತ್ಯುಕ್ತೇಃ ದೇವಾದಿಭ್ಯೋಽಧಿಕಸ್ಸನ್ ಪುರುಷೋ ರುದ್ರಃ ಅಜಾಯತ ಇತ್ಯಪಿ ಅರ್ಥೋ ಧ್ಯೇಯಃ । ಅಧಿ ಇತ್ಯುಕ್ತಿಃ ಜ್ಯೇಷ್ಠಸೂನತ್ವಸೂಚನಾಯ । ಸ ಜಾತಃ ಇತ್ಯಾದೇಃ ಯಥಾಸಂಭವಂ ಪೂರ್ವವದರ್ಥಃ । ಯತ್ಪುರುಷೇಣ ರುದ್ರರೂಪೇಣ ಹವಿಷಾ ದೇವಾಃ ಬ್ರಹ್ಮಾದಯಃ ಇತಿ ವಾ । ಬ್ರಹ್ಮೇತ್ಯುಪಲಕ್ಷ್ಯ ಬ್ರಹ್ಮಾ ದೇವಾಶ್ಚೇತಿ ವಾ । 'ಪುರುಷಂ ಜಾತಮಗ್ರತಃ ಇತ್ಯಸ್ಯ ಅಗ್ರತೋ ಜಾತಂ ಪುರುಷಂ ರುದ್ರಂ ಚತುರ್ಮುಖಾದ್ದೇವೇಭ್ಯಃ ಪ್ರಥಮತೋ ಜಾತಂ ಜ್ಯೇಷ್ಠಪುತ್ರಮಿತ್ಯರ್ಥಃ । ಶಿಷ್ಟಂ ಪ್ರಾಗ್ವತ್ ॥ 7 ॥

ದೇವತೆಗಳು ಸಾಧ್ಯರು ಮತ್ತು ಋಷಿಗಳು ಆದಿಯಲ್ಲಿ ವಿಷ್ಣುವಿನಿಂದ ಜನಿಸಿದ ಬ್ರಹ್ಮ ದೇವರನ್ನು ಯಜ್ಞದಲ್ಲಿ ಸಂಸ್ಕರಿಸಿದರು. ಆ ಬ್ರಹ್ಮದೇವರಿಂದ ಯಜ್ಞನಾಮಕ ವಿಷ್ಣುವನ್ನು ಆರಾಧಿಸಿದರು.

ವಿಶೇಷ ವಿಚಾರ - ಬ್ರಹ್ಮ ದೇವರು ತನ್ನ ಜ್ಯೇಷ್ಠ ಪುತ್ರನಾದ ರುದ್ರನನ್ನು ಪಶುವನ್ನಾಗಿ ಸಂಕಲ್ಪಿಸಿ ಮಾನಸ ಯಜ್ಞದಿಂದ ವಿಷ್ಣುವನ್ನು ಆರಾಧಿಸಿದರು ಎಂದು ಗೀತಾಭಾಷ್ಯದಲ್ಲಿ ಹೇಳಿದಂತೆ ಮುಂದೆ ಹೇಳುವ ರೀತಿಯಲ್ಲೂ ಅರ್ಥೈಸಬಹುದು - 'ವಿರಾಜೋ ಅಧಿ ಪುರುಷಃ' ಎಂಬ ಮಂತ್ರಕ್ಕೆ ದೇವತೆಗಳಿಗಿಂತ ಶ್ರೇಷ್ಠರಾದ ರುದ್ರದೇವರು ಬ್ರಹ್ಮದೇವರಿಂದ ಜನಿಸಿದರು ಎಂದು ಅರ್ಥ. ಅಧಿ ಎಂದು ಹೇಳಿದ್ದು ರುದ್ರ ದೇವರು ಬ್ರಹ್ಮ ದೇವರ ಜ್ಯೇಷ್ಠ ಪುತ್ರ ಎಂದು ತಿಳಿಸಲು, 'ಸ ಜಾತೋ ಅತ್ಯರಿಚ್ಯತ' ಇತ್ಯಾದಿ ಮಂತ್ರಕ್ಕೆ ರುದ್ರ ಪರವಾಗಿ ಹಿಂದಿನಂತೆ ಅರ್ಥವನ್ನು ತಿಳಿಯಬೇಕು. ಯತ್ ಪುರುಷೇಣ ಹವಿಷಾ ಎಂಬ ಮಂತ್ರಕ್ಕೆ ಬ್ರಹ್ಮಾದಿ ದೇವತೆಗಳು ರುದ್ರನನ್ನು ಪಶುವನ್ನಾಗಿ ಮಾಡಿ ಮಾನಸ ಯಜ್ಞವನ್ನು ಆಚರಿಸಿದರೆಂದು ಅರ್ಥ. ಒಟ್ಟಿನಲ್ಲಿ ಬ್ರಹ್ಮ ದೇವರು ಯಜಮಾನರು, ರುದ್ರನು ಪಶುಪುರುಷ ದೇವತೆಗಳು ಋತ್ವಿಕ್ಕುಗಳು ಎಂಬುದಾಗಿಯೂ ಈ ಮಂತ್ರಗಳ ಅರ್ಥವನ್ನು ಭಾವಿಸಬಹುದು.

ತಸ್ಮಾದ್ಯಜ್ಞಾತ್ ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂನ್ತಾಂಶ್ಚಕ್ರೇ ವಾಯವ್ಯಾನಾರಣ್ಯಾನ್ ಗ್ರಾಮ್ಯಾಶ್ಚ ಯೇ ॥ 8 ॥

ತೃತೀಯಾ- ತಸ್ಮಾದ್ಯಜ್ಞಾದಿತಿಃ । ಮಾನಸಯಜ್ಞೇನಾರಾಧಿತಾತ್ ಯಜ್ಞನಾಮಕಾತ್ ಪುರುಷಾತ್ ಬಾಹ್ಯಯಜ್ಞಸಾಧನಾದಿಪದಾರ್ಥಾ ಜಾತಾ ಇತ್ಯುಚ್ಯತೇ । ಸರ್ವೈಃ ಹೂಯತೇ ಹವಿರಾದಿದಾನೇನ ಆರಾಧ್ಯತೇ ಸರ್ವೈರುಪಜೀವ್ಯತ ಇತಿ ವಾ ಸರ್ವಹುತ್ । 'ಹು ದಾನಾದಾನಯೋಃ' ಇತ್ಯತಃ ಕ್ವಿಪ್ ।

Rarest Archiver

'ಹ್ರಸ್ವಸ್ಯ ಪಿತಿ ಕೃತಿ ತುಕ್' ಇತಿ ತುಕ್ । ಸರ್ವಯಜ್ಞಾದಿಕರ್ಮಣ್ಯಾಹೂಯತ ಇತಿ ವಾ । ಹ್ವೇಞ್‌ಶಬ್ದೇ ಕ್ವಿಪ್ ವಚಸ್ವಪಿ ಇತ್ಯಾದಿನಾ ಸಂಪ್ರಸಾರಣಮ್ । ತುಕ್ । ತಸ್ಮಾತ್ಸರ್ವಹುತಃ । ಯಜ್ಞಾತ್ ಯಜ್ಞನಾಮಕ-ಹರೇಃ ಸಕಾಶಾತ್ । ತಥಾ ಸರ್ವೈಃ ಹೂಯತೇ ಆಹೂಯತೇ ವಾ ಭಗವಾನ್ ಪುರುಷೋ ಯಸ್ಮಿನ್ ಯಜ್ಞೇ ಸ ಯಜ್ಞಃ ಸರ್ವಹುತ್ । ತಾದೃಶಾತ್ ಪ್ರಕೃತಾತ್ತಸ್ಮಾತ್ ಮಾನಸಯಜ್ಞನಿಮಿತ್ತಾತ್ ಪೃಷದಾಜ್ಯಂ ದಧಿಮಿಶ್ರಿತಂ ಯಜ್ಞಸಾಧನಂ ಆಜ್ಯಾಖ್ಯಂ ಸಂಭೃತಂ ಸಂಪಾದಿತಮುತ್ಪನ್ನಮಿತ್ಯರ್ಥಃ । ತಥಾ ವಾಯವ್ಯಾನ್ ವಾಯುದೇವತಾಕಾನ್ ಶ್ವೇತಪಶ್ವಾದೀನ್ ಆರಣ್ಯಾನ್ ಅರಣ್ಯಭವಾನ್ ಹರಿಣಪ್ರಭೃತೀನ್ । ಯೇ ಚ ಗ್ರಾಮ್ಯಾಃ ಗ್ರಾಮಭವಾಃ ಗವಾಶ್ವಾದಯಃ ತಾಂಶ್ಚ ಪಶೂನ್ ಚಕ್ರೇ ಕೃತವಾನ್ । ಸ ಯಜ್ಞನಾಮಾ ಸರ್ವಹುತ್ ಪುರುಷಃ ಇತಿ ವಿಪರಿಣಾಮೇನಾನ್ವಯಃ ॥ 8 ॥

ಮಾನಸಿಕ ಯಜ್ಞದಲ್ಲಿ ಸರ್ವರಿಂದಲೂ ಆರಾಧಿತನಾದ ಯಜ್ಞನಾಮಕನಾದ ಆ ಪರಮಾತ್ಮನಿಂದ ದಧಿಮಿಶ್ರಿತವಾದ ಯಜ್ಞಸಾಧನವಾದ ಆಜ್ಯ ದ್ರವ್ಯವು ಹುಟ್ಟಿತು. ವಾಯು ದೇವತಾಕವಾದ ಬಿಳಿಬಣ್ಣದ ಪಶುಗಳನ್ನೂ ಕಾಡಿನಲ್ಲಿರುವ ಜಿಂಕೆ ಮೊದಲಾದ ಪಶುಗಳನ್ನೂ ಗ್ರಾಮ್ಯವಾದ ಕುದುರೆ ಮೊದಲಾದ ಪಶುಗಳನ್ನೂ ಯಜ್ಞನಾಮಕನಾದ ಪರಮಾತ್ಮನು ಸೃಷ್ಟಿ ಮಾಡಿದನು.

ವಿಶೇಷ ವಿಚಾರ – ದೇವತೆಗಳು ಮಾನಸಿಕ ಯಜ್ಞಮಾಡಿದ ಬಳಿಕ ಪ್ರಸನ್ನನಾದ ವಿಷ್ಣುವು ಬಾಹ್ಯ ಯಜ್ಞಸಾಧನ ದ್ರವ್ಯಗಳನ್ನು ಸೃಷ್ಟಿ ಮಾಡಿದನು ಎಂದು ಈ ಋಕ್ಕಿನಲ್ಲಿ ಹೇಳುತ್ತಾರೆ.

ಸರ್ವಹುತಃ – ಸರ್ವಹುತ್ ಎಂದರೆ ಸರ್ವರಿಂದಲೂ ಹವಿರಾದಿ ದಾನದ ಮೂಲಕವಾಗಿ ಆರಾಧಿಸಲ್ಪಟ್ಟವನು, ಅಥವಾ ಸರ್ವರ ಜೀವನಕ್ಕೆ ಕಾರಣನಾದವನು ಎಂದರ್ಥ. ಹುತ್ ಎಂಬುದು ಹು ದಾನಾದಾನಯೋಃ ಎಂಬ ಧಾತುವಿನ ಮೇಲೆ ಕ್ವಿಪ್ ಪ್ರತ್ಯಯ, ತುಕ್ ಆಗಮ ಬಂದು ನಿಷ್ಪನ್ನವಾದ ರೂಪ.

ಅಥವಾ ಯಜ್ಞಾದಿಕರ್ಮಗಳಲ್ಲಿ ಆಹ್ವಾನಿಸಲ್ಪಡುವವನು ಎಂಬ ಅರ್ಥದಲ್ಲಿ ಹ್ವೇಞ್ ಶಬ್ದೇ ಎಂಬ ಧಾತುವಿನ ಮೇಲೆ ಕ್ವಿಪ್ ಪ್ರತ್ಯಯ ಬಂದು ಸಂಪ್ರಸಾರಣ ಮತ್ತು ತುಕ್ ಆಗಮ ಬಂದು ಹುತ್ ಎಂದು ನಿಷ್ಪನ್ನವಾಗಿದೆ ಎಂದೂ ಭಾವಿಸಬಹುದು.

ಅಥವಾ 'ಸರ್ವೈಃ ಹೂಯತೇ ಪುರುಷಃ ಯಸ್ಮಿನ್' (ಯಾವ ಯಜ್ಞದಲ್ಲಿ ಭಗವಂತನು ಆಹ್ವಾನಿಸಲ್ಪಡುವನೋ ಅದು) ಎಂಬ ವ್ಯುತ್ಪತ್ತಿಯಿಂದ ಸರ್ವಹುತಃ ಎಂಬುದನ್ನು ಯಜ್ಞಾತ್ ಎಂಬುದಕ್ಕೆ ವಿಶೇಷಣವನ್ನಾಗಿ ಇಟ್ಟುಕೊಳ್ಳಬಹುದು. ಆ ಯಜ್ಞರೂಪ ನಿಮಿತ್ತದಿಂದಾಗಿ ಆಜ್ಯಾದಿ ದ್ರವ್ಯಗಳು ಹುಟ್ಟಿದವು ಎಂದು ಅನ್ವಯ ಮಾಡಬೇಕು.

ತಸ್ಮಾದ್ ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ ಯಜುಸ್ತಸ್ಮಾದಜಾಯತ ॥ 9 ॥

ಅಥ ಚತುರ್ಥೀ ಋಕ್– ತಸ್ಮಾದ್ಯಜ್ಞಾತ್ಸರ್ವಹುತ ಋಚ ಇತಿ । ಯಜ್ಞಸಾಧನದ್ರವ್ಯೋತ್ಪತ್ತಿಮುಕ್ತ್ವಾ ಮಂತ್ರೋತ್ಪತ್ತಿರತ್ರ ಉಚ್ಯತೇ । ತಸ್ಮಾದ್ಯಜ್ಞಾತ್ಸರ್ವಹುತ ಇತಿ ಪ್ರಾಗ್ವತ್ । ಋಚಃ ಜಜ್ಞಿರೇ, ಜನೀ

Rarest Archiver

ಪ್ರಾದುರ್ಭಾವೇ ತದ್ಬುದ್ಧಿಸ್ಥಾಃ ಸೃಷ್ಟಿಕಾಲೇ ಬ್ರಹ್ಮಾದೀನ್ ಪ್ರತ್ಯುಚ್ಚಾರಿತಾಃ ಇತ್ಯರ್ಥಃ । ಸಾಮಾನಿ ಜಜ್ಞಿರೇ । ಛಂದಾಂಸಿ ಗಾಯತ್ರ್ಯಾದೀನಿ ಜಜ್ಞಿರೇ ಭಗವದುಚ್ಚಾರಣೇನ ವ್ಯಕ್ತಾ ಅಭವನ್ನಿತ್ಯರ್ಥಃ । ಯಜುರಜಾಯತ ಇತ್ಯಸ್ಯಾಪ್ಯೇವಂ ಧ್ಯೇಯಮ್ । 'ತದುತ್ಪತ್ತಿವಚಶ್ಚೈವ ಭವೇದ್ವ್ಯಕ್ತಿವ್ಯಪೇಕ್ಷಯಾ । ಅವಾಂತರಾಭಿಮಾನಾನಾಂ ದೇವಾನಾಂ ವಾ ವ್ಯಪೇಕ್ಷಯಾ । ಇತ್ಯುಕ್ತದಿಶಾ ಅವಾಂತರಋಗಾದ್ಯಭಿಮಾನಿನಾಂ ದೇವತಾನಾಂ ಜನ್ಮಾದ್ಯಪೇಕ್ಷಯಾ ಜನ್ಮಾದ್ಯುಕ್ತಿರಿತಿ ಧ್ಯೇಯಮ್ । 'ಸರ್ವವೇದಾಭಿಮಾನಿತ್ವಾತ್ ಶ್ರೀರ್ಬ್ರಹ್ಮಾಣೀ ಚ ಭಾರತೀ' ಇತ್ಯುಕ್ತತ್ವಾತ್ ದೇವ್ಯಾ ನಿತ್ಯತ್ವಾತ್ ಅವಾಂತರೇತ್ಯುಕ್ತಮ್ । ಛಂದೋಭಿಮಾನಿನಸ್ತು 'ಗಾಯತ್ರೀ ಬೃಹತೀ ಚೈವ ತಾಸ್ಸರ್ವಾ ಗರುಡಸ್ತಥಾ । ಬ್ರಹ್ಮಾಣ್ಯನುಷ್ಟುಬಿಂದ್ರಾಣೀ ತ್ರಿಷ್ಟುಪ್ ಸ್ವಾಹೇತಿ ಚೋಚ್ಯತೇ' ಇತ್ಯಾದಿನಾ ಋಗ್ಭಾಷ್ಯೋಕ್ತದಿಶಾ ಧ್ಯೇಯಾಃ ॥ 9 ॥

ಎಲ್ಲರಿಂದಲೂ ಆರಾಧಿಸಲ್ಪಟ್ಟ ಯಜ್ಞನಾಮಕನಾದ ಆ ಪರಮಾತ್ಮನಿಂದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಗಾಯಿತ್ರೀ ಮೊದಲಾದ ಛಂದಸ್ಸುಗಳು ಉಚ್ಚಾರಣೆಯಿಂದ ಅಭಿವ್ಯಕ್ತವಾದವು.

ವಿಶೇಷ ವಿಚಾರ – ಹಿಂದಿನ ಮಂತ್ರದಲ್ಲಿ ಯಜ್ಞಸಾಧನ ದ್ರವ್ಯಸೃಷ್ಟಿಯನ್ನು ಹೇಳಿ, ಈ ಮಂತ್ರದಲ್ಲಿ ಮಂತ್ರಗಳ ಅಭಿವ್ಯಕ್ತಿಯು ಹೇಳಲ್ಪಟ್ಟಿದೆ.

ಜಜ್ಞಿರೇ – ಇಲ್ಲಿ ಜಜ್ಞಿರೇ ಎಂಬುದಕ್ಕೆ ಮತ್ತು ಅಜಾಯತ ಎಂಬುದಕ್ಕೆ ಭಗವದ್ಬುದ್ಧಿಸ್ಥವಾದ ವೇದಗಳ ಅಭಿವ್ಯಕ್ತಿ ಎಂಬ ಅರ್ಥವನ್ನು ಇಟ್ಟುಕೊಳ್ಳಬೇಕು.

ತದುತ್ಪತ್ತಿವಚಶ್ಚೈವ ಭವೇತ್ ವ್ಯಕ್ತಿಮಪೇಕ್ಷ್ಯ ತು ।
ಅವಾಂತರಾಭಿಮಾನಾನಾಂ ದೇವಾನಾಂ.... ॥

(ವೇದಗಳಿಗೆ ಉತ್ಪತ್ತಿಯನ್ನು ಹೇಳುವ ವಾಕ್ಯವು ಆ ವೇದಗಳ ಅಭಿವ್ಯಕ್ತಿಯನ್ನು ಇಟ್ಟುಕೊಂಡಾಗಲೀ ಅಥವಾ ವೇದಗಳ ಅವಾಂತರಾಭಿಮಾನಿ ದೇವತೆಗಳ ಜನನವನ್ನು ಇಟ್ಟುಕೊಂಡಾಗಲೀ ಪ್ರವೃತ್ತವಾಗಿರುತ್ತದೆ.) ಎಂಬ ಪ್ರಮಾಣವಚನವೇ ಇದಕ್ಕೆ ಆಧಾರ. ಸರ್ವ ವೇದಗಳಿಗೂ ಲಕ್ಷ್ಮೀ ದೇವಿಯರು ಅಭಿಮಾನಿಗಳಾದ್ದರಿಂದ ಅವರಿಗೆ ಜನನವಿಲ್ಲದ ಪ್ರಯುಕ್ತ ಅವಾಂತರಾಭಿಮಾನಿಗಳ ಜನನವನ್ನಿಟ್ಟು ಕೊಳ್ಳಬೇಕು ಎಂದು ಪ್ರಮಾಣವಚನದಲ್ಲಿ ಹೇಳಿದ್ದಾರೆ.

ಗಾಯತ್ರೀ ಬೃಹತೀ ಛಂದಸ್ಸುಗಳಿಗೆ ಲಕ್ಷ್ಮೀ ಸರಸ್ವತೀ, ಭಾರತೀ ಮತ್ತು ಗರುಡದೇವತೆಗಳು ಅಭಿಮಾನಿಗಳು. ಅನುಷ್ಟುಪ್ ಛಂದಸ್ಸಿಗೆ ಸರಸ್ವತೀ ಅಭಿಮಾನಿಯು. ತ್ರಿಷ್ಟುಪ್ ಛಂದಸ್ಸಿಗೆ ಶಚೀದೇವಿಯು ಅಭಿಮಾನಿ.

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।
ಗಾವೋ ಹ ಜಜ್ಞಿರೇ ತಸ್ಮಾತ್ ತಸ್ಮಾಜ್ಜಾತಾ ಅಜಾವಯಃ ॥ 10 ॥

ಪಂಚಮೀ ಋಕ್ ತಸ್ಮಾದಶ್ವಾ ಅಜಾಯಂತ ಇತಿ । ಪುನರತ್ರ ಬ್ರಹ್ಮ ಅಶ್ವಮೇಧಾದಿ ಯಜ್ಞಸಾಧನಾದಿ ದ್ರವ್ಯಾಣಿ ಪ್ರಾಕ್ ಸಾಮಾನ್ಯತಃ ಉಕ್ತಾನ್ಯಪಿ ವಿಶೇಷತ ಉಚ್ಯಂತೇ । ತಸ್ಮಾತ್ ಪ್ರಾಗುಕ್ತಯಜ್ಞನಾಮಕಾತ್ ಪುರುಷಾತ್ ಅಶ್ವಾ ಅಜಾಯಂತ । ಯೇ ಕೇ ಚ ಉಭಯಾದತಃ ಊರ್ಧ್ವಾಧೋಭಾಗಯೋರುಭಯತ್ರ

Rarest Archiver

ದಂತವಂತಃ ಅಶ್ವತರೀಗರ್ದಭಪ್ರಭೃತಯಃ ತೇಽಪ್ಯಜಾಯಂತ । ವಯಸಿ ದಂತಸ್ಯ ದತೃ ಛಂದಸಿ ಚ ಇತಿ ದದಾದೇಶಃ । ಗಾವೋಽಪಿ ತಸ್ಮಾಜ್ಜಜ್ಞಿರೇ । ಅಜಾದಯಶ್ಚ ತಸ್ಮಾಜ್ಜಾತಾಃ । ತಸ್ಮಾದಿತ್ಯನೇಕವಾರೋಕ್ತಿಃ ಅನ್ಯಸ್ಯ ಸ್ವಾತಂತ್ರ್ಯೇಣ ಹೇತುತ್ವನಿರಾಸತಾತ್ಪರ್ಯದ್ಯೋತನಾರ್ಥಃ । ಹೇತ್ಯಾಶ್ಚರ್ಯೇ ಪ್ರಸಿದ್ಧೌ ವಾ । ॥ 10 ॥

ಯಜ್ಞನಾಮಕನಾದ ಆ ಪುರುಷನಿಂದ ಯಜ್ಞಸಾಧನವಾದ ಕುದುರೆಗಳು ಹುಟ್ಟಿದವು. ಮೇಲೆ ಮತ್ತು ಕೆಳಗಿನ ವಸಡುಗಳಲ್ಲಿ ಹಲ್ಲುಗಳುಳ್ಳ ಹೇಸರಗತ್ತೆ ಮತ್ತು ಕತ್ತೆಗಳು ಹುಟ್ಟಿದವು. ಹಸುಗಳು ಅವನಿಂದಲೇ ಹುಟ್ಟಿದವು. ಆಡು ಕುರಿಗಳೂ ಅವನಿಂದಲೇ ಹುಟ್ಟಿದವು.

ವಿಶೇಷ ವಿಚಾರ – ಹಿಂದಿನ ಮಂತ್ರಗಳಲ್ಲಿ ಸಾಮಾನ್ಯವಾಗಿ ಯಜ್ಞಸಾಧನ ದ್ರವ್ಯಗಳ ಉತ್ಪತ್ತಿಯನ್ನು ಹೇಳಿದ್ದರೂ ಇಲ್ಲಿ ವಿಶೇಷವಾಗಿ ಅಶ್ವಮೇಧಾದಿ ಯಾಗಸಾಧನ ದ್ರವ್ಯಗಳ ಉತ್ಪತ್ತಿಯನ್ನು ಹೇಳಲಾಗಿದೆ.

ಉಭಯಾದತಃ – ಎಂಬಲ್ಲಿ ದಂತ ಶಬ್ದಕ್ಕೆ 'ವಯಸಿ ದಂತಸ್ಯ ದತೃ' 'ಛಂದಸಿ ಚ' ಎಂಬ ಸೂತ್ರಗಳಿಂದ ದಂತ ಶಬ್ದಕ್ಕೆ ದತ್ ಆದೇಶ ಬಂದಿದೆ.

ಈ ಮಂತ್ರದಲ್ಲಿ ಭಗವಂತನೊಬ್ಬನೇ ಎಲ್ಲದಕ್ಕೂ ಸ್ವತಂತ್ರ ಕಾರಣ ಎಂದು ತಿಳಿಸಲು ಅನೇಕ ಬಾರಿ ತಸ್ಮಾತ್ ಎಂದು ಪ್ರಯೋಗಿಸಲಾಗಿದೆ. ಹ ಎಂಬುದು ಆಶ್ಚರ್ಯಾರ್ಥಕ ಅಥವಾ ಪ್ರಸಿದ್ಧಾರ್ಥಕವಾಗಿದೆ.

ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।
ಮುಖಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥ 11 ॥

ಪುರುಷಸೂಕ್ತೇ ತೃತೀಯೋ ವರ್ಗಃ । ತೃತೀಯೇ ಅದ್ಯಾ ಋಕ್ ಯತ್ಪುರುಷಂ ವ್ಯದಧುರಿತಿ । ಪೂರ್ವಂ ಸಾಮಾನ್ಯತೋ ಮಾನಸಯಜ್ಞಾರಾಧಿತಾತ್ ಪುರುಷಾತ್ ಬಾಹ್ಯಯಜ್ಞಸಾಧನಾದಿಪದಾರ್ಥಜನಿಮುಕ್ತ್ವಾ ಅಂಗೇಭ್ಯಃ ಸೃಷ್ಟಾನ್ ಪ್ರಶ್ನಪೂರ್ವಕಮಾಹ – ಯತ್ಪುರುಷಮಿತಿ । ಯತ್ ಯಂ ಯದೇತಿ ವಾ । 'ದೇವಾಃ ಪುರುಷಂ ವ್ಯದಧುಃ ದೇವಾ ಯಜ್ಞಮತನ್ವತ' ಇತಿ ಪ್ರಾಗುಕ್ತಮಾನಸಯಜ್ಞೇ ವಿಶೇಷೇಣೋದ್ದೇಶ್ಯತಯಾ ಅದಧುಃ, ಧೃತವಂತಃ ಮನಸಾ ಧ್ಯಾತವಂತಃ, ಡು ಧಾಞ್ ಧಾರಣೇ ಲಙ್ । ತದಾ ಕತಿಧಾ ಕೇನ ಪ್ರಕಾರೇಣ ವ್ಯಕಲ್ಪಯನ್, ವಿಕಲ್ಪಿತವಂತಃ ಮನಸಾ ವಿವಿಧತಯಾ ಕಲ್ಪಿತವಂತಃ । ಕಿಂಕಿಂಜನಕಾಂಗತ್ವೇನ ಧ್ಯಾತವಂತ ಇತ್ಯರ್ಥಃ । ತದೇವ ಕಿಂಚಿತ್ ವ್ಯನಕ್ತಿ – ಮುಖಮಿತಿ । ಅಸ್ಯ ಪುರುಷಸ್ಯ ಮುಖಂ ಕಿಮಾಸೀತ್ ಕಿಂಜನಕಮುಚ್ಯತೇ । ಬಾಹೂ ಚ ಕಿಂಜನಕೌ ಉಚ್ಯೇತೇ । ಊರೂ ಚ ಕೌ ಕಿಂಜನಕೌ ಉಕ್ತೌ ಪಾದಾವಿತಿ ಕಾವಿತ್ಯನುಷಜ್ಯತೇ । ಕಿಂಜನಕೌ ಉಚ್ಯೇತೇ ಇತ್ಯರ್ಥಃ ॥ 11 ॥

ಯಾವಾಗ ದೇವತೆಗಳು ಮಾನಸ ಯಜ್ಞದಲ್ಲಿ ಯಾವ ಪರಮ ಪುರುಷನನ್ನು ಆರಾಧಿಸಿದರೋ ಆಗ ಆ ಪರಮ ಪುರುಷನನ್ನು ಯಾವ ಪ್ರಕಾರದಿಂದ ಚಿಂತಿಸಿದರು ? ಆ ಪುರುಷನ ಮುಖವು ಯಾವುದಕ್ಕೆ ಜನಕವಾಗಿತ್ತು ? ಕೈಗಳು ಯಾವುದಕ್ಕೆ ಜನಕವಾಗಿದ್ದವು ? ತೊಡೆಗಳು ಯಾವುದಕ್ಕೆ ಜನಕವಾಗಿದ್ದವು ? ಕಾಲುಗಳು ಯಾವುದಕ್ಕೆ ಜನಕವಾಗಿದ್ದವು ?

Rarest Archiver

ವಿಶೇಷ ವಿಚಾರ – ಹಿಂದಿನ ಮಂತ್ರಗಳಲ್ಲಿ ಸಾಮಾನ್ಯವಾಗಿ ಬಾಹ್ಯ ಯಜ್ಞಸಾಧನ ಪದಾರ್ಥಗಳ ಸೃಷ್ಟಿಯನ್ನು ಹೇಳಿ ಮುಂದೆ ಭಗವಂತನ ಅಂಗಗಳಿಂದಾದ ಸೃಷ್ಟಿಯನ್ನು ನಿರೂಪಿಸಲು ಈ ಮಂತ್ರದಲ್ಲಿ ಪ್ರಶ್ನೆಯನ್ನು ಮಾಡುತ್ತಿದ್ದಾರೆ.

ಬ್ರಾಹ್ಮಣೋಽಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥ 12 ॥

ದ್ವಿತೀಯಾ- ಬ್ರಾಹ್ಮಣೋಽಸ್ಯೇತಿ । ಪೃಷ್ಟಸ್ಯೋತ್ತರಮತ್ರೋಚ್ಯತೇ । ಅಸ್ಯ ಪುರುಷಸ್ಯ ಮುಖಂ ಬ್ರಾಹ್ಮಣಃ ಆಸೀತ್ । ಮುಖಾದ್ ಬ್ರಾಹ್ಮಣಜಾತ್ಯಾಕ್ರಾಂತ ಆಸೀತ್ ಉತ್ಪದ್ಯತ ಇತ್ಯರ್ಥಃ । ಸ ಬ್ರಾಹ್ಮಣ್ಯಾಭಿಮಾನವಾನ್ ಬ್ರಹ್ಮೇತಿ, ಕ್ಷತ್ರಜಾತ್ಯಭಿಮಾನೀ ತು ಪವನಃ, ವೈಶ್ಯಜಾತ್ಯಭಿಮಾನೀ ತು ನಾಸಿಕ್ಯೋ ವಾಯುಃ, ಶೂದ್ರಜಾತ್ಯಭಿಮಾನೀ ನಿರ್ಋತಿರಿತಿ ಪ್ರಥಮೇ ಅವ್ಯಾಕೃತಬ್ರಾಹ್ಮಣೇ ಬೃಹದ್ಭಾಷ್ಯೋಕ್ತದಿಶಾ ತತ್ತಜ್ಜಾತ್ಯಭಿಮಾನವಾನ್ ಬ್ರಾಹ್ಮಣಾದಿಶಬ್ದೇನ ಗ್ರಾಹ್ಯಃ । ಬಾಹೂ ಬಾಹುಭ್ಯಾಂ ರಾಜನ್ಯಃ ಕ್ಷತ್ರಿಯಃ ಕೃತಃ ಉತ್ಪನ್ನಃ । ವೈಶ್ಯಃ ಇತಿ ಯತ್ ತತ್ ಊರೂ ಊರುಭ್ಯಾಂ ಜಾತಮ್ । ಯದ್ವೈಶ್ಯಃ ಯೋ ವೈಶ್ಯಃ ತತ್ ಸಃ ಊರುಭ್ಯಾಂ ಜಾತ ಇತಿ ವಾ । ಪದ್ಭ್ಯಾಂ ಪಾದಾಭ್ಯಾಂ ಶೂದ್ರಃ ಅಜಾಯತೇತ್ಯರ್ಥಃ । ಪದ್ಭ್ಯಾಮಿತ್ಯುಕ್ತಿಬಲಾತ್ ಸರ್ವತ್ರ ಉಕ್ತದಿಶಾ ಪಂಚಮೀ ಧ್ಯೇಯಾ । 'ಯಸ್ಮಾದ್ಯಜ್ಜಾಯತೇ ಚಾಂಗಾಲ್ಲೋಕವೇದಾದಿಕಂ ಹರೇಃ । ತನ್ನಾಮವಾಚ್ಯಮಂಗಂ ತದ್ಯಥಾ ಬ್ರಹ್ಮಾದಿಕಂ ಮುಖಮ್' ಇತಿ ನಾರದೀಯೋಕ್ತದಿಶಾ ಅಭೇದೋಕ್ತೇಃ ಸಮಾಧಿರ್ಧ್ಯೇಯಃ ॥ 12 ॥

ಆ ಪರಮ ಪುರುಷನ ಮುಖದಿಂದ ಬ್ರಾಹ್ಮಣ ಜಾತಿಗೆ ಅಭಿಮಾನಿಗಳಾದ ಬ್ರಹ್ಮದೇವರು ಹುಟ್ಟಿದರು. ಕೈಗಳಿಂದ ಕ್ಷತ್ರಿಯಜಾತ್ಯಭಿಮಾನಿಗಳಾದ ವಾಯುದೇವರು ಹುಟ್ಟಿದರು. ತೊಡೆಗಳಿಂದ ವೈಶ್ಯ ಜಾತ್ಯಭಿಮಾನಿಯಾದ ನಾಸಿಕ್ಯವಾಯು ಹುಟ್ಟಿದನು. ಕಾಲುಗಳಿಂದ ಶೂದ್ರಜಾತ್ಯಭಿಮಾನಿಯಾದ ನಿರ್ಋತಿಯು ಹುಟ್ಟಿದನು.

ವಿಶೇಷ ವಿಚಾರ – ಪದ್ಭ್ಯಾಂ ಎಂಬಲ್ಲಿ ಪಂಚಮೀ ವಿಭಕ್ತಿಯನ್ನು ಪ್ರಯೋಗಿಸಿದ್ದರಿಂದ ಅದರಂತೆ ಮುಖಂ ಬಾಹೂ ಊರೂ ಎಂಬಲ್ಲಿಯೂ ಪಂಚಮೀ ಅರ್ಥವನ್ನೇ ಇಟ್ಟುಕೊಳ್ಳಬೇಕು.

ಯಸ್ಮಾತ್ ಯಜ್ಜಾಯತೇ ಚಾಂಗಾಲ್ಲೋಕವೇದಾದಿಕಂ ಹರೇಃ ।
ತನ್ನಾಮವಾಚ್ಯಮಂಗಂ ತತ್ ಯಥಾ ಬ್ರಹ್ಮಾದಿಕಂ ಮುಖಮ್ ॥

ಪರಮಾತ್ಮನ ಯಾವ ಅಂಗದಿಂದ ಯಾವ ದೇವತೆ ಅಥವಾ ಲೋಕಗಳು ಹುಟ್ಟಿವೆಯೋ ಆ ಅಂಗಗಳು ಆ ದೇವತೆ ಅಥವಾ ಲೋಕಗಳ ಹೆಸರಿನಿಂದಲೇ ಕರೆಯಲ್ಪಡುತ್ತವೆ. ಉದಾ – ಮುಖದಿಂದ ಬ್ರಹ್ಮನು ಹುಟ್ಟಿದ್ದರಿಂದ 'ಮುಖಂ ಬ್ರಾಹ್ಮಣಃ' ಎಂದು ವ್ಯಪದೇಶವಿದೆ ಎಂಬ ನಾರದೀಯ ವಚನಕ್ಕನುಸಾರವಾಗಿ ಅಭೇದೋಕ್ತಿಯನ್ನು ವ್ಯಾಖ್ಯಾನ ಮಾಡಬೇಕು.

ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುರಜಾಯತ ॥ 13 ॥

Rarest Archiver

ತೃತೀಯಾ- ಚಂದ್ರಮಾ ಇತಿ । ಪ್ರಾಗ್ಜಾತಿಸೃಷ್ಟಿರುಕ್ತಾ । ಅತ್ರ ತು ದೇವಸೃಷ್ಟಿರುಚ್ಯತೇ । ಮನಸಃ ಇತಿ ಪಂಚಮೀ । ಅಸ್ಯ ಇತಿ ಪುರುಷವಾಚಿಪದಮಾಕೃಷ್ಯತೇ । ತದಾ ಅಸ್ಯ ಮನಸಾ ಅಸ್ಯ ಚಕ್ಷುಷೋಃ ಅಸ್ಯ ಮುಖಾತ್ ಇತ್ಯಾದಿರೂಪೇಣಾನ್ವೇತಿ । ಪ್ರಾಕ್ ಬ್ರಾಹ್ಮಣೋ ಮುಖಾದಿತ್ಯುಕ್ತಂ ನೈತಾವದೇವ ಕಿಂತು ಇಂದ್ರಶ್ಚಾಗ್ನಿಶ್ಚ ಅಜಾಯತ ಇತಿ ಪ್ರತ್ಯೇಕಮನ್ವಯಃ । ವಾಯುಃ ಮುಖ್ಯವಾಯುಃ ಪ್ರವಹೋ ವಾ ॥ 13 ॥

ಈ ಪುರುಷನ ಮನಸ್ಸಿನಿಂದ ಚಂದ್ರನು ಹುಟ್ಟಿದನು. ಕಣ್ಣಿನಿಂದ ಸೂರ್ಯನು ಹುಟ್ಟಿದನು. ಮುಖದಿಂದ ಇಂದ್ರ ಮತ್ತು ಅಗ್ನಿದೇವತೆಗಳೂ ಹುಟ್ಟಿದರು. ಉಸಿರಿನಿಂದ ಮುಖ್ಯವಾಯುವೂ ಹುಟ್ಟಿದರು.

ವಿಶೇಷ ವಿಚಾರ :- ಹಿಂದಿನ ಮಂತ್ರದಲ್ಲಿ ಜಾತಿಗಳಿಗೆ ಅಭಿಮಾನಿಗಳಾದ ದೇವತೆಗಳ ಸೃಷ್ಟಿಯನ್ನು ಹೇಳಿದರು. ಈ ಮಂತ್ರದಲ್ಲಿ ಬೇರೆ ದೇವತೆಗಳ ಸೃಷ್ಟಿಯನ್ನು ಹೇಳಲಾಗಿದೆ.

ಪ್ರಾಣಾದ್ ವಾಯುಃ ಎಂಬಲ್ಲಿ ವಾಯು ಪದದಿಂದ ಪ್ರವಹ ವಾಯುವನ್ನೂ ಇಟ್ಟುಕೊಳ್ಳಬಹುದು.

ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ ತಥಾ ಲೋಕಾನ್ ಅಕಲ್ಪಯನ್ ॥ 14 ॥

ಚತುರ್ಥೀ- ನಾಭ್ಯಾ ಆಸೀದಿತಿ । ದೇವಸೃಷ್ಟಿರುಕ್ತಾ ಪೂರ್ವತ್ರ, ಅತ್ರ ತು ಲೋಕಸೃಷ್ಟಿರುಚ್ಯತೇ । ನಾಭ್ಯಾ ಇತಿ ಪಂಚಮೀ । ಅತ್ರ ಅಂತರಿಕ್ಷಾದಿಪದೈಃ ಸಾಭಿಮಾನಿಲೋಕಸಂಗ್ರಹಃ । ಸಮವರ್ತತ ಅಜಾಯತೇತ್ಯರ್ಥಃ । ಪದ್ಭ್ಯಾಂ ಭೂಮಿಃ ಸಮವರ್ತತ । ಶ್ರೋತ್ರಾದ್ದಿಶಃ ಸಮವರ್ತಂತ ಇತ್ಯರ್ಥಃ । ತಥಾ ಇತಿ ಸಮುಚ್ಚಯೇ । ಭೂಮ್ಯಂತರಿಕ್ಷದ್ಯುಲೋಕೇಭ್ಯೋಽನ್ಯಾನಪಿ ಲೋಕಾನ್ ಅಕಲ್ಪಯನ್ ಕೃತವಾನ್ । ಅಸ್ಯ ಇತ್ಯನುಷಕ್ತಂ ಪದಂ ಪ್ರಥಮಾಂತತಯಾ ವಿಪರಿಣಮ್ಯಾತ್ರ ಕರ್ತೃತ್ವೇನಾನ್ವೇತಿ ಅಯಂ ಪುರುಷೋ ಲೋಕಾನಕಲ್ಪಯತ್ ಇತಿ । ಯದ್ವಾ ಸ್ವಾವಯವೇಭ್ಯೋ ದೇವಾನಸೃಜತ್ ತಥಾ ಲೋಕಾ-ನಪಿ, ಕಥಮಿತ್ಯತಸ್ತದ್ವಿವರಣಂ- ನಾಭ್ಯಾ ಇತ್ಯಾದಿ । ಅತ್ರ ದ್ಯುಶಬ್ದೇನ ಸ್ವರ್ಗಾದುಪರಿತನಾಃ ಮಹರಾ-ದಯೋ ಗ್ರಾಹ್ಯಾಃ ॥ 14 ॥

ಪುರುಷನ ನಾಭಿಯಿಂದ ಅಂತರಿಕ್ಷ ಲೋಕವು ಮತ್ತು ಅದರ ಅಭಿಮಾನಿ ದೇವತೆಯೂ ಹುಟ್ಟಿದರು, ತಲೆಯಿಂದ ಸ್ವರ್ಗಲೋಕವು ಮತ್ತು ಅದರ ಅಭಿಮಾನಿಗಳು ಜನಿಸಿದರು. ಕಿವಿಯಿಂದ ದಿಕ್ಕುಗಳು ಮತ್ತು ದಿಗಭಿಮಾನಿದೇವತೆಗಳೂ ಹುಟ್ಟಿದರು. ಮತ್ತು ಈ ಪುರುಷನು ಇನ್ನೂ ಅನೇಕ ಲೋಕಗಳನ್ನೂ ಮತ್ತು ಅವುಗಳ ಅಭಿಮಾನಿ ದೇವತೆಗಳನ್ನು ಸೃಷ್ಟಿ ಮಾಡಿದನು.

ವಿಶೇಷ ವಿಚಾರ - ಹಿಂದಿನ ಮಂತ್ರದಲ್ಲಿ ದೇವ ಸೃಷ್ಟಿಯನ್ನು ಹೇಳಿದರು. ಈ ಮಂತ್ರದಲ್ಲಿ ಲೋಕ ಸೃಷ್ಟಿಯನ್ನು ಹೇಳಲಾಗಿದೆ. ಲೋಕಾನ್ ಅಕಲ್ಪಯತ್ ಎಂದು ಹೇಳಿ ಅದರ ವಿವರಣೆಯನ್ನು ನಾಭ್ಯಾ ಆಸೀದ್ ಎಂಬಲ್ಲಿ ಮಾಡಿದ್ದಾರೆಂದೂ ಭಾವಿಸಬಹುದು. ಈ ಪಕ್ಷದಲ್ಲಿ ದ್ಯು ಶಬ್ದದಿಂದ ಸ್ವರ್ಗದಿಂದ ಮೇಲಿನ ಮಹರಾದಿ ಲೋಕಗಳನ್ನು ಇಟ್ಟುಕೊಳ್ಳಬೇಕು. ಭೂಮಿ ಪದದಿಂದ ಅದರ ಕೆಳಗಿನ ಲೋಕಗಳನ್ನು ಗ್ರಹಿಸಬೇಕು.

Rarest Archiver

ಸಪ್ತಾಸ್ಯಾಸನ್ ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್ ॥ 15 ॥

ಸಪ್ತಾಸ್ಯಾಸನ್ ಇತಿ ಪಂಚಮೀ ಋಕ್ - ಗ್ರೀಷ್ಮ ಇಧ್ಮಃ ಶರದ್ಧವಿಃ ಇತ್ಯನಂತರಮೇವ ಸಂಗತತ್ವಾತ್ತತ್ರೈವ ವ್ಯಾಖ್ಯಾತಾ । ಅತ್ರೈವ ವ್ಯಾಖ್ಯೇಯತ್ವಪಕ್ಷೇ ತು ಸಿಂಹಾವಲೋಕನನ್ಯಾಯೇನ ಪ್ರಾಗುಕ್ತಸಾಧನಾವಶಿಷ್ಟಸಾಧನಾನ್ಯಾಹೇತಿ ಗಮನಿಕಾ ಜ್ಞೇಯಾ ॥ 15 ॥

ಸಪ್ತಾಸ್ಯಾಸನ್ ಎಂಬ ಮಂತ್ರವು 'ಗ್ರೀಷ್ಮ ಇಧ್ಮಃ ಶರದ್ಧವಿಃ' ಎಂಬ ಮಂತ್ರದ ನಂತರದಲ್ಲಿ ಸಂಗತವಾಗಿದೆಯೆಂಬ ಕಾರಣದಿಂದ ಅದನ್ನು ಅಲ್ಲಿಯೇ ವ್ಯಾಖ್ಯಾನಿಸಲಾಗಿದೆ. ಇಲ್ಲಿಯೇ ವ್ಯಾಖ್ಯಾನ ಮಾಡಬೇಕೆಂದು ಭಾವಿಸುವುದಾದರೆ - ಅವಶಿಷ್ಟ ಯಜ್ಞ ಸಾಧನಗಳನ್ನು ಹೇಳಲು ಸಪ್ತಾಸ್ಯಾಸನ್ ಎಂಬುದು ಪ್ರವೃತ್ತವಾಗಿದೆ ಎಂದಿಟ್ಟುಕೊಂಡು ಹಿಂದಿನಂತೆ ಅರ್ಥವನ್ನು ತಿಳಿಯಬೇಕು.

ವೇದಾಹಮೇತಂ ಪುರುಷಂ ಮಹಾಂತಂ
ಆದಿತ್ಯವರ್ಣಂ ತಮಸಸ್ತು ಪಾರೇ ।
ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ
ನಾಮಾನಿ ಕೃತ್ವಾಭಿವದನ್ಯದಾಸ್ತೇ ॥ 16 ॥

ಅತ್ರ ಸೂಕ್ತೇ ಯಜುಶ್ಶಾಖಾಯಾಂ 'ತಥಾ ಲೋಕಾನಕಲ್ಪಯನ್' ಇತಿ ಮಂತ್ರಾನಂತರಂ ಮಂತ್ರದ್ವಯಂ ಪಠ್ಯತೇ ವೇದಾಹಮೇತಂ-ಧಾತಾ ಪುರಸ್ತಾದಿತಿ । ಭಾಷ್ಯಕಾರೈಸ್ತತ್ರೋದಾಹೃತತ್ವಾತ್ ತದರ್ಥ ಉಚ್ಯತೇ ॥ ಯಃ ಧೀರಃ ಧೀಮಾನ್ । ಬುದ್ಧಿಪೂರ್ವಕಮಿತಿ ಯಾವತ್ । ಸರ್ವಾಣಿ ರೂಪಾಣಿ ವಾಚ್ಯಾರ್ಥಭೂತಾನಿ ವಸ್ತೂನಿ । ವಿಚಿತ್ಯ ನಿರ್ಮಾಯ । ನಾಮಾನಿ ಕೃತ್ವಾ ಅಭಿವದನ್ । ಆಸ್ತೇ । ನಾಮರೂಪಾತ್ಮಕಪ್ರಪಂಚಂ ಕೃತ್ವಾ ಯ ಆಸ್ತೇ । ಏತಂ ಮಹಾಂತಂ ದೇಶಕಾಲಗುಣಾಪರಿಚ್ಛಿನ್ನಮ್ । ತಮಸಃ ಪ್ರಕೃತೇಃ ಪಾರೇ ದೂರೇ ಸ್ಥಿತಂ ಪ್ರಕೃತಿಬಂಧಹೀನಮ್ । ಆದಿತ್ಯವರ್ಣಂ ಪ್ರಕಾಶಮಾನಂ ಪುರುಷಮಹಂ ವೇದ ಜಾನಾಮೀತಿ ಮಂತ್ರದ್ರಷ್ಟೃವಚನಮ್ ॥ 16 ॥

ನಾಮ ರೂಪಾತ್ಮಕ ಪ್ರಪಂಚವನ್ನು ಸೃಷ್ಟಿ ಮಾಡಿ ಅವುಗಳಿಂದ ಲೋಕ ವ್ಯವಹಾರ ನಡೆಸುತ್ತಿರುವ ನಿತ್ಯನಾದ ವ್ಯಾಪ್ತನಾದ ಗುಣಪೂರ್ಣನಾದ ಪ್ರಕೃತಿ ಬಂಧರಹಿತನಾದ ಪರಮ ಪುರುಷನನ್ನು ನಾನು ತಿಳಿಯುತ್ತೇನೆ. (ಇದು ಮಂತ್ರದ್ರಷ್ಟಾರನ ವಚನ)

ವಿಶೇಷ ವಿಚಾರ - ಯಜುರ್ವೇದದಲ್ಲಿ ಪುರುಷಸೂಕ್ತದಲ್ಲಿ ತಥಾ ಲೋಕಾನ್ ಅಕಲ್ಪಯನ್ ಎಂದಾದ ಮೇಲೆ ವೇದಾಹಮೇತಂ, ಮತ್ತು ಧಾತಾ ಪುರಸ್ತಾತ್ ಎಂಬ ಎರಡು ಮಂತ್ರಗಳನ್ನು ಪಠಿಸುತ್ತಾರೆ. ಶ್ರೀಮದಾಚಾರ್ಯರು ಅವುಗಳನ್ನು ಅಲ್ಲಲ್ಲಿ ಉದಾಹರಿಸಿದ್ದಾರೆ ಆದ್ದರಿಂದ ಇಲ್ಲಿ ವ್ಯಾಖ್ಯಾನ ಮಾಡಲಾಗಿದೆ.

Rarest Archiver

ಧಾತಾ ಪುರಸ್ತಾದ್ಯಮುದಾಜಹಾರ
ಶಕ್ರಃ ಪ್ರವಿದ್ವಾನ್ ಪ್ರದಿಶಶ್ಚತಸ್ರಃ ।
ತಮೇವಂ ವಿದ್ವಾನಮೃತ ಇಹ ಭವತಿ
ನಾನ್ಯಃ ಪಂಥಾ ಅಯನಾಯ ವಿದ್ಯತೇ ॥ 17 ॥

ಧಾತಾ ಚತುರ್ಮುಖಃ । ಪುರಸ್ತಾತ್ ಪೂರ್ವಮ್ । ಯಂ ಪುರುಷ ಪ್ರಾಗುಕ್ತಮಹಿಮವಂತಮ್ । ಉದಾಜಹಾರ ಸರ್ವದಿಕ್ಷು ಪ್ರಖ್ಯಾಪಿತವಾನಿತ್ಯರ್ಥಃ । ತಂ ಪುರುಷಮ್ । ಏವಂ ಸಹಸ್ರಶೀರ್ಷತ್ವಾದಿಮಹಿಮಾವತ್ಪ್ರಕಾರೇಣ । ಇಹ ಲೋಕೇ । ವಿದ್ವಾನ್ ಜಾನನ್ । ಅಮೃತೋ ಮುಕ್ತೋ ಭವತಿ । ಅನ್ಯಃ ಪಂಥಾಃ ಜ್ಞಾನಾದನ್ಯಃ ಮಾರ್ಗಃ ಉಪಾಯಃ । ಅಯನಾಯ ಮೋಕ್ಷಾಯ । ನ ವಿದ್ಯತೇ ನಾಸ್ತಿ । ತದಾಹ ಸೂತ್ರಕಾರಃ 'ವಿದ್ಯೈವ ತು ನಿರ್ಧಾರಣಾತ್' ಇತಿ ॥ 17 ॥

ಬ್ರಹ್ಮದೇವರು ಯಾವ ಪೂರ್ವೋಕ್ತ ಮಹಿಮೋಪೇತ ಪರಮಾತ್ಮನನ್ನು ಎಲ್ಲಾ ದಿಕ್ಕುಗಳಲ್ಲಿ ಅರಿತರೋ, ಅಂತಹ ಮಹಿಮೋಪೇತನಾದ ಭಗವಂತನನ್ನು ತಿಳಿದವನು ಮುಕ್ತನಾಗುವನು. ಮೋಕ್ಷವನ್ನು ಹೊಂದಲು ಈ ಜ್ಞಾನಕ್ಕಿಂತ ಬೇರೆ ಉಪಾಯವಿಲ್ಲ.

ವಿಶೇಷ ವಿಚಾರ - ಇದೇ ಪ್ರಮೇಯವು 'ಓಂ ವಿದ್ಯೈವ ತು ನಿರ್ಧಾರಣಾತ್ ಓಂ' ಎಂಬ ಬ್ರಹ್ಮ ಸೂತ್ರದಲ್ಲಿ ನಿರ್ಣಯಿಸಲ್ಪಟ್ಟಿದೆ.

ಯಜ್ಞೇನ ಯಜ್ಞಮಯಜಂತ ದೇವಾ-
ಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ
ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ॥ 18 ॥

ಷಷ್ಠೀ- ಯಜ್ಞೇತಿ । ಯಜ್ಞಕರಣೇನ ದೇವಾಃ ಪುರುಷಾರ್ಥಭಾಜೋ ಜಾತಾ ಇತ್ಯುಚ್ಯತೇ । ದೇವತ್ವಯೋಗ್ಯಾ ಮನುಷ್ಯಾಃ ಜ್ಞಾನಕರ್ಮಾತ್ಮಕೇನ ಯಜ್ಞೇನ ಯಜ್ಞಂ ಭಗವಂತಂ ಪುರುಷಂ ಅಯಜಂತ । ತತಃ ತೇನ ಜ್ಞಾನಪೂರ್ವಕಕರ್ಮಣಾ ತಾನಿ ದೈವತಾನಿ ಸ್ವಸ್ವಪದಂ ಪ್ರಾಪ್ಯ ಪ್ರಥಮಾನಿ ಮುಖ್ಯಾನಿ ಉತ್ತಮಾನಿ ಧರ್ಮಾಣಿ ಧಾರಕಾಣಿ । 'ಡು ಧಾಞ್ ಧಾರಣೇ' ಇತ್ಯತ ಔಣಾದಿಕೋ ಮನಿನ್-ಪ್ರತ್ಯಯಃ । ತೇ ದೇವತ್ವಯೋಗ್ಯಾಃ ಮನುಷ್ಯಾಃ ಜ್ಞಾನಪೂರ್ವಕಭಗವದಾರಾಧನರೂಪಯಜ್ಞೇನ, ದೇವತ್ವಂ ಪ್ರಾಪ್ಯ ಸ್ವಸ್ವಪದಸ್ಥಾಃ ಸಂತಃ ತಪನವರ್ಷಣಾದಿನಾ ಮುಖ್ಯತೋ ಧಾರಕತ್ವಾತ್ ಧರ್ಮ-

Rarest Archiver

ನಾಮಕಾ ಆಸನ್ನಿತ್ಯರ್ಥಃ । ತೇ ಪುನಃ ಮಹಿಮಾನಃ ಮಹಾತ್ಮಾನಃ ದೇವಾಃ ಸ್ವಸ್ವಪದಾವಸಾನೇ ನಾಕಮ್ ಅಕಂ ಸುಖವಿರೋಧಿ ದುಃಖಂ ತನ್ನೇತಿ ನಾಕಂ, ನಞೋ ನಲೋಪಾಭಾವಃ, ನಸಮಾಸೋ ವಾ, ಪೂರ್ಣಸುಖಾತ್ಮಕಂ ಮೋಕ್ಷಂ ಸಚಂತೇ । ಷಚ ಸಮವಾಯೇ । ವ್ಯತ್ಯಯೇನ ಲಙರ್ಥೇ ಲಟ್ । ಪ್ರಾಪ್ನುವನ್ । ಹ ಇತಿ ಹರ್ಷೇ ಪ್ರಸಿದ್ಧೌ ವಾ । ಯತ್ರ, ಪೂರ್ವೇ ಪೂರ್ವಸ್ಮಿನ್ ಕಲ್ಪೇ । ಯದ್ವಾ ಪೂರ್ವೇ ಇತಿ ಪ್ರಥಮಾ, ಪುರಾತನಾಃ ಪೂರ್ವಕಲ್ಪಮುಕ್ತಾಃ ಇತಿ ಯಾವತ್ । ಸಾಧ್ಯಾಃ ಸಾಧ್ಯಾದಿ-ದೇವಾಃ ಸಂತಿ ತನ್ನಾಮಕಮಿತ್ಯನ್ವಯಃ । ಪುರುಷಸೂಕ್ತೇ ತೃತೀಯೋ ವರ್ಗಃ ॥ 18 ॥

ಇತಿ ಶ್ರೀರಾಘವೇಂದ್ರಯತಿವಿರಚಿತಂ ಪುರುಷಸೂಕ್ತಂ ಸಂಪೂರ್ಣಮ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥

ದೇವಪದವಿಗೆ ಯೋಗ್ಯರಾದ ಮನುಷ್ಯರು ಜ್ಞಾನ ಕರ್ಮಾತ್ಮಕವಾದ ಯಜ್ಞದಿಂದ ಯಜ್ಞನಾಮಕ ಭಗವಂತನನ್ನು ಆರಾಧಿಸಿದರು. ಅವರು ದೇವ ಪದವಿಯನ್ನು ಹೊಂದಿ ಉತ್ತಮರಾಗಿ ಪ್ರಕಾಶಿಸುವುದು ಮಳೆ ಸುರಿಸುವುದು ಮೊದಲಾದ ತಮ್ಮ ಪದವಿಯ ಕಾರ್ಯವನ್ನು ಮಾಡಿದರು. ತಮ್ಮ ಪದವಿಯನ್ನು ಅನುಭವಿಸಿದ ನಂತರದಲ್ಲಿ ಪೂರ್ವಕಲ್ಪದಲ್ಲಿ ಮುಕ್ತರಾದ ದೇವತೆಗಳಿರುವ ಮುಕ್ತಿ ಲೋಕದಲ್ಲಿ ನೆಲೆಸಿದರು.

ವಿಶೇಷ ವಿಚಾರ - ಯಜ್ಞವನ್ನು ಮಾಡಿ ದೇವತೆಗಳು ಪುರುಷಾರ್ಥವನ್ನು ಪಡೆದರೆಂದು ಇಲ್ಲಿ ಹೇಳಿದ್ದಾರೆ. ಇಲ್ಲಿರುವ ನಾಕಂ ಎಂಬ ಪದಕ್ಕೆ ಕ ಸುಖ, ಅಕ - ದುಃಖ ನಾಕ-ದುಃಖಲೇಶವೂ ಇಲ್ಲದ ಸುಖ ಎಂಬ ವ್ಯುತ್ಪತ್ತಿಯಿಂದ ಪೂರ್ಣಸುಖಾತ್ಮಕವಾದ ಮೋಕ್ಷ ಎಂದರ್ಥ.

ಹ ಎಂಬುದು ಹರ್ಷ ಅಥವಾ ಪ್ರಸಿದ್ಧಿ ವಾಚಕವಾಗಿದೆ.

ಶ್ರೀಮತ್ಪುರುಷಸೂಕ್ತಸ್ಯ ವ್ಯಾಖ್ಯಾನಂ ಶಿಷ್ಯಚೋದನಾತ್ ।
ರಾಘವೇಂದ್ರೇಣ ಯತಿನಾ ನಿರ್ಮಿತಂ ಹರಿತುಷ್ಟಯೇ ॥

ಶಿಷ್ಯರ ಪ್ರಾರ್ಥನೆಯಂತೆ ರಾಘವೇಂದ್ರಯತಿಗಳಿಂದ ಪುರುಷಸೂಕ್ತವ್ಯಾಖ್ಯಾನವು ಹರಿಪ್ರೀತಿಗಾಗಿ ರಚಿಸಲ್ಪಟ್ಟಿತು.

ಇತಿ ಶ್ರೀರಾಘವೇಂದ್ರತೀರ್ಥವಿರಚಿತವ್ಯಾಖ್ಯೋಪೇತ ಪುರುಷಸೂಕ್ತದ
ಕನ್ನಡಾನುವಾದವು ಮುಗಿಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

★ ★ ★

Rarest Archiver